ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 2 ಜನವರಿ 10, 1982 ಬೆಲೆ : 60 ಪೈಸೆ

ತ್ರಿಪುರಾ : ಮತ್ತೆ ಗೆಲುವು

ತ್ರಿಪುರಾದಲ್ಲಿ ಆದಿವಾಸಿ ಪ್ರದೇಶದ ಸ್ವಾಯತ್ತ ಜಿಲ್ಲಾ ಮಂಡಳಿಯ 28 ಸ್ಥಾನಗಳಿಗೆ 1982 ಜನವರಿ 3ರಂದು ನಡೆದ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ವಾಮರಂಗಕ್ಕೆ 21 ಸ್ಥಾನಗಳೂ, ತ್ರಿಪುರಾ ಉಪಜಾತಿ ಸಮಿತಿಗೆ 7 ಸ್ಥಾನಗಳೂ ದೊರೆತಿವೆ. ಕಾಂಗ್ರೆಸ್ ಚುನಾವಣೆಯನ್ನು ಬಹಿಷ್ಕರಿಸಿತ್ತಾದರೂ, ತ್ರಿಪುರಾ ಉಪಜಾತಿ ಸಮಿತಿಗೆ ಬೆಂಬಲವಾಗಿ ಕೆಲಸಮಾಡಿತ್ತು. ಸ್ವಾಯತ್ತ ಮಂಡಳಿ ರಚನೆಯನ್ನೂ, ಚುನಾವಣೆಯನ್ನೂ ವಿರೋಧಿಸಿ ಅಮ್ರಾ ಬಂಗಾಲಿ ತ್ರಿಪುರಾ ಬಂದ್‌ಗೆ ಕರೆ ನೀಡಿತ್ತು. ಆದರೆ ಆದಿವಾಸಿ ಜನತೆ ಸಿ.ಪಿ.ಐ.(ಎಂ) ಮತ್ತು ವಾಮರಂಗದ ಮೇಲಿರುವ ವಿಶ್ವಾಸವನ್ನು ಎತ್ತಿ ತೋರಿಸಿದೆ. ವಾಮರಂಗಕ್ಕೆ ¾ ಬಹುಮತ ದೊರಕುವಂತೆ ಮಾಡಿ ತಮಗಿರುವ ಅಪರಿಮಿತ ವಿಶ್ವಾಸವನ್ನು ವ್ಯಕ್ತಪಡಿಸಿದ ಆದಿವಾಸಿ ಜನತೆಗೂ, ವಾಮರಂಗಕ್ಕೂ ಕ್ರಾಂತಿಕಾರಿ ವಂದನೆಗಳು.

ಪ್ರಜಾಸತ್ತೆಯ ಕೊಲೆ

ಕಾಂಗ್ರೆಸ್(ಐ) ನೇತೃತ್ವದ ಅಲ್ಪಸಂಖ್ಯಾತ ಸರಕಾರವನ್ನು ಕೇರಳದ ಜನತೆಯ ಮೇಲೆ ಹೇರುವುದರ ಮೂಲಕ ಕಾಂಗ್ರೆಸ್ ಆಡಳಿತಗಾರರು ಮತ್ತೊಮ್ಮೆ ಎಲ್ಲಾ ಪ್ರಜಾಪ್ರಭುತ್ವ ನಿಯಮಗಳನ್ನೂ, ಸಂಪ್ರದಾಯವನ್ನೂ ನೆಲಸಮ ಮಾಡಿದ್ದಾರೆ. ರಾಜ್ಯಪಾಲರುಗಳು ಕೇಂದ್ರ ಸರಕಾರದ ಕೈಗೊಂಬೆಗಳೆನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಅಸ್ಸಾಮಿನಲ್ಲಿ ವಿರೋಧ ಪಕ್ಷಗಳ ಕೂಟವು ರಾಜ್ಯಪಾಲರನ್ನು ಭೆಟ್ಟಿಯಾಗಿ, ತಮಗೆ ಬಹುಮತವಿರುವುದರಿಂದ ಸರಕಾರ ರಚಿಸಲು ಅನುಮತಿ ಕೇಳಿದಾಗ ಅಂತಹ ಕೂಟದ ಸರಕಾರ ಭದ್ರವಾಗಿರಲಾರದೆಂಬ ಕಾರಣದಿಂದ ಬೇಡಿಕೆಯನ್ನು ನಿರಾಕರಿಸಲಾಯಿತು. ಈ ರಾಜ್ಯಪಾಲರು, ಈ ಹುದ್ದೆಗೆ ನೇಮಕವಾಗುವ ತನಕ ಕಾಂಗ್ರೆಸ್ ಪಕ್ಷದ ಮುಖಂಡರಾಗಿದ್ದರು ಎಂಬುದನ್ನು ಸ್ಮರಿಸಿಕೊಳ್ಳಬೇಕು. ಅಸ್ಸಾಮಿನಲ್ಲಿ ಕಾಂಗ್ರೆಸ್ ಸರಕಾರ ರಚಿಸುವ ಪ್ರಯತ್ನ ಮುಂದುವರಿಯುತ್ತಿದೆ.

ಆದರೆ ಕೇರಳದಲ್ಲಿ ಅದೇ ವಾದವನ್ನು ಅನ್ವಯಗೊಳಿಸಲಿಲ್ಲ. ರಚಿತವಾಗುವ ಸರಕಾರದ ಅಸ್ತಿತ್ವದ ಮಾತಂತಿರಲಿ, ಅದಕ್ಕೆ ಬಹುಮತವಿದೆಯೇ ಎಂದು ನೋಡಿದಲ್ಲಿ ಕಾಂಗ್ರೆಸ್ ಮುಖ್ಯಮಂತ್ರಿಯೊಂದಿಗೆ ಅಧಿಕಾರವಹಿಸಿಕೊಂಡಿರುವ ಮಂತ್ರಿಮಂಡಲಕ್ಕೆ 141 ಸದಸ್ಯರ ಬಲವಿರುವ ಕೇರಳ ವಿಧಾನಸಭೆಯಲ್ಲಿ ಕೇವಲ 68 ಸದಸ್ಯರ ಬೆಂಬಲವಿದೆಯಷ್ಟೇ. ಈ ರೀತಿ ಒಂದೊಂದೆಡೆ ಒಂದೊಂದು ಅಳತೆಗೋಲುಗಳನ್ನು ಉಪಯೋಗಿಸುವುದೂ, ಕಾನೂನು ಬಾಹಿರವಾಗಿಯೂ ಪ್ರಜಾಪ್ರಭುತ್ವ ಮೌಲ್ಯಗಳಿಗೆ ವಿರೋಧವಾಗಿಯೂ ನಡೆಯುವುದು ಕಾಂಗ್ರೆಸ್‌ಗೆ ಹೊಸತೇನೂ ಅಲ್ಲ:

ಸಂಪಾದಕೀಯ

1980 ಜನವರಿಯಲ್ಲಿ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಸರ್ವಾಧಿಕಾರಿ ವಿರೋಧಿ, ಪ್ರಜಾಪ್ರಭುತ್ವ ವೇದಿಕೆಯಾಗಿದ್ದ ಎಡ ಪ್ರಜಾಪ್ರಭುತ್ವ ರಂಗಕ್ಕೆ 93 ಸ್ಥಾನ ದೊರೆತು, ಕಾಂಗ್ರೆಸ್‌ಗೆ ಕೇವಲ 17 ಸ್ಥಾನ ದೊರೆಯುವಂತೆ ಮಾಡಿದ ಕೇರಳದ ಜನತೆಯ ಅಭಿಪ್ರಾಯಕ್ಕೆ ವಿರೋಧವಾಗಿ ಈಗ ಕಾಂಗ್ರೆಸ್ ನೇತೃತ್ವದ ಸರಕಾರ ರಚಿಸಲಾಗಿದೆ. ಜನತೆಯು ತೋರಿದ್ದ ವಿಶ್ವಾಸಕ್ಕೆ ದ್ರೋಹ ಬಗೆದು, ಕಾಂಗ್ರೆಸ್ ನೇತೃತ್ವದ ಸರಕಾರ ರಚಿಸಲು ಅಂತೋನಿ ಮತ್ತು ಕಂಪೆನಿ ಹಾಗೂ ಮಣಿ ಕಾಂಗ್ರೆಸ್ಸಿಗರು ಸಂಚು ನಡೆಸಿದರು. ಆದರೆ ಉತ್ತಮ ದಾಖಲೆಗಳನ್ನು ಮಾಡಿಕೊಂಡಿರುವ ಎಡ ಪ್ರಜಾಪ್ರಭುತ್ವ ರಂಗದ ಮೇಲೆ ಕೇರಳದ ಜನತೆಯ ವಿಶ್ವಾಸ ಹೆಚ್ಚಿರುವುದು ಖಂಡಿತ. ಆದುದರಿಂದಲೇ ಅಸೆಂಬ್ಲಿಯನ್ನು ರದ್ದುಗೊಳಿಸಿ ಚುನಾವಣೆ ನಡೆಸುವುದು ಕಾಂಗ್ರೆಸ್ ಆಡಳಿತಗಾರರಿಗೆ ಇಷ್ಟವಿಲ್ಲ.

ಪಶ್ಚಿಮ ಬಂಗಾಳದಲ್ಲಿ ಅಧಿಕಾರರೂಢ ಎಡರಂಗವು ನಿಗದಿ ಅವಧಿಗೆ ಮೊದಲೇ ಚುನಾವಣೆ ನಡೆಸಲು ಕೇಳಿಕೊಂಡಿದೆ. ಅಲ್ಲೂ ಕಾಂಗ್ರೆಸ್‌ಗೆ ಚುನಾವಣೆ ಬೇಕಾಗಿಲ್ಲ ಎಂಬುದು ಪ್ರಧಾನಿಯವರ ಮಾತಿನಿಂದ ಸೂಚಿತವಾಗುತ್ತದೆ. ಪಶ್ಚಿಮ ಬಂಗಾಲದಲ್ಲಿ ಮತದಾರರ ಪಟ್ಟಿ ಸರಿ ಇಲ್ಲ; ಅದನ್ನು ಸರಿಪಡಿಸದೆ ಮತ್ತು ಕಾನೂನು ವ್ಯವಸ್ಥೆ ಸರಿ ಇಲ್ಲದೆ ಸರಿಯಾದ ಚುನಾವಣೆ ನಡೆಸುವುದು ಅಸಾಧ್ಯ. ಮತದಾರರ ಪಟ್ಟಿಯನ್ನು ಸರಿಪಡಿಸಲು 6 ತಿಂಗಳುಗಳಿಂದ ಒಂದು ವರ್ಷ ಕಾಲ ಬೇಕು ಎಂಬಿತ್ಯಾದಿ ಮಾತುಗಳನ್ನು ಪ್ರಧಾನಿಯವರು ಹೇಳಿರುವರು. ಅಂದರೆ ಪಶ್ಚಿಮ ಬಂಗಾಲದಲ್ಲೂ ಏನಾದರೂ ಮಾಡಿ, ಎಡರಂಗದ ಅಧಿಕಾರಾವಧಿ ಮುಗಿದ ಮೇಲೆ ಅಧ್ಯಕ್ಷ ರಾಳ್ವಿಕೆ ನಡೆಸಿ ಅಥವಾ ಇನ್ನಾವುದಾದರೂ ತಂತ್ರಗಳ ಮೂಲಕ ಚುನಾ

(ಕಡೇ ಪುಟ ನೋಡಿ)

ಕಾರ್ಮಿಕವರ್ಗದ ರಾಜಕೀಯ ಕಾರ್ಯಾಚರಣೆಗೆ

ಮುಂಬೈ ಸಮಾವೇಶ ತೋರಿದ ಮಾರ್ಗ

ಮುಂಬೈಯಲ್ಲಿ ಜೂನ್ 4ರಂದು ನಡೆದ ರಾಷ್ಟ್ರೀಯ ಸಮಾವೇಶ ದೇಶದ ಕಾರ್ಮಿಕ ಚಳುವಳಿಯ ಬೆಳವಣಿಗೆಯಲ್ಲಿ ಒಂದು ಮಹತ್ವದ ಘಟನೆ.

ಇಂಟಕ್‌ನ ಕಾಂಗ್ರೆಸ್ (ಐ) ಹಿಂಬಾಲಕ ವಿಭಾಗವೊಂದು ಬಿಟ್ಟು ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ, ಕೇಂದ್ರ ಹಾಗೂ ರಾಜ್ಯ ಸರಕಾರೀ ನೌಕರರ ಹಾಗೂ ರಾಷ್ಟ್ರೀಯ ಮಹಾಸಂಘಗಳ ಪ್ರತಿನಿಧಿಗಳು ದೇಶದ ಎಲ್ಲಾ ಭಾಗಗಳಿಂದ ಉಕ್ಕು, ಕಲ್ಲಿದ್ದಲು, ವಿದ್ಯುತ್, ರೈಲ್ವೇ, ಅಂಚೆ, ತಂತಿ, ರಕ್ಷಣಾ ವಿಭಾಗ, ಬಂದರುಕಟ್ಟೆಗಳು, ರಸ್ತೆ ಸಾರಿಗೆ, ರಸಾಯನ ಹಾಗೂ ಔಷಧಿ ಕೈಗಾರಿಕೆ, ತೋಟಗಾರಿಕೆ, ಬ್ಯಾಂಕ್, ವಿಮೆ ಹೀಗೆ ಎಲ್ಲಾ ಕೈಗಾರಿಕೆಗಳಿಂದ ಬಂದು ಇದರಲ್ಲಿ ಭಾಗವಹಿಸಿದ್ದರು ಎಂಬುದಷ್ಟೇ ಈ ಸಮಾವೇಶದ ವೈಶಿಷ್ಟ್ಯವಲ್ಲ. ಹಿಂದಿನ ಸಮಾವೇಶಗಳಂತೆ ಇದು ಕೆಲವು ನಿರ್ದಿಷ್ಟ ಬೇಡಿಕೆಗಳಿಗೇ ಮಾತ್ರ ಸೀಮಿತವಾಗಿರಲಿಲ್ಲ. ಒಂದು ನಿರ್ದಿಷ್ಟ ಕೈಗಾರಿಕೆಯಲ್ಲಿ, ಪ್ರದೇಶದಲ್ಲಿ ಅಥವಾ ರಾಜ್ಯದಲ್ಲಿ ಪ್ರತ್ಯೇಕವಾಗಿ ನಡೆಯುವ ಹೋರಾಟಗಳು ಸರಕಾರ ಸರ್ವರೀತಿಯಿಂದಲೂ ನಡೆಸುತ್ತಿರುವ ಹಲ್ಲೆಗಳನ್ನು ಎದುರಿಸಲು ಶಕ್ತವಾಗುವುದಿಲ್ಲ ಎಂದು ದೇಶದ ಕಾರ್ಮಿಕವರ್ಗ ಅರಿತುಕೊಂಡ ಅಂಶ ಈ ಸಮಾವೇಶದಲ್ಲಿ ಎದ್ದು ಕಾಣುತ್ತಿತ್ತು.

ಭಾರತ ಸರಕಾರ ತೀವ್ರಗೊಳ್ಳುತ್ತಿರುವ ಆರ್ಥಿಕ ಬಿಕ್ಕಟ್ಟಿನ ಹೊರೆಯನ್ನು ದುಡಿಯುವ ಜನತೆಯ ಹೆಗಲಿಗೆ ಹೊರಿಸಿ, ಇನ್ನೊಂದೆಡೆ ಬಂಡವಾಳಶಾಹಿಗಳ ಮನವೊಲಿಸಲು ಮತ್ತು ದೇಶೀ ಹಾಗೂ ವಿದೇಶೀ ಗುತ್ತೇದಾರಿಗಳಿಗೆ ಸಾಕಷ್ಟು ರಿಯಾಯಿತಿ ನೀಡಲು ಪ್ರಯತ್ನಿಸುತ್ತಿದೆ ಎಂಬುದನ್ನು ಈ ಸಮಾವೇಶ ಕರೆದ ಸಂಘಟನೆಗಳ ನಾಯಕರು ಈಗ ಅರಿತುಕೊಂಡಿದ್ದಾರೆ ಎಂಬ ಅಂಶ ಈ ಸಮಾವೇಶದ ಯಶಸ್ಸಿನ ಸೂಚಕವಾಗಿದೆ.

ವೇತನ ಕಡಿತದ ಧೋರಣೆ, ತುಟ್ಟಿಭತ್ಯದ ಏರಿಕೆಗೆ ಮಿತಿ ಹೇರಿಕೆ, ಪೋಲೀಸ್ ಹಾಗೂ ಮಾಲೀಕರ ಬಾಡಿಗೆ ಗೂಂಡಾಗಳ ಮೂಲಕ ಕಾರ್ಮಿಕರ ಮೇಲೆ ನಿರ್ದಯ ದಬ್ಬಾಳಿಕೆ, ಕಾಂಗ್ರೆಸ್ (ಐ)ನ ಅಲ್ಪಸಂಖ್ಯಾತ ಯೂನಿಯನ್‌ಗಳನ್ನು ಸಾಕಿಕೊಂಡು ಅವುಗಳೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ಬಹುಸಂಖ್ಯಾತ ಕಾರ್ಮಿಕರ ಮೇಲೆ ಹೇರುವುದು, ತುರ್ತುಪರಿಸ್ಥಿತಿಯ ದಿನಗಳ ಹೊಸ ಆವೃತ್ತಿಯಾದ ರಾಷ್ಟ್ರೀಯ ಭದ್ರತಾ ಶಾಸನವನ್ನು ಉಪಯೋಗಿಸುವುದು, ಪ್ರಾದೇಶಿಕ ಹಾಗೂ ಜಾತಿ ಭಾವನೆಗಳಿಗೆ ಪ್ರೋತ್ಸಾಹ ಕೊಡುವ ವಿಚ್ಛಿದ್ರಕಾರೀ ವಿಧಾನದ ಅನುಸರಣೆ ಇವೆಲ್ಲವುಗಳ ಮೂಲಕ ಗುತ್ತೇದಾರಿಗಳಿಗೆ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ದುಡಿಯುವ ಜನತೆಯನ್ನು ಲೂಟಿ ಹೊಡೆಯಲು ಲಂಗುಲಗಾಮಿಲ್ಲದ ಸ್ವಾತಂತ್ರ್ಯ ಕೊಡಲಾಗುತ್ತಿದೆ. ಈ ತಿಳುವಳಿಕೆಯೇ ಸಮಾವೇಶದಲ್ಲಿ ಎಲ್ಲಾ ಭಾಷಣಕಾರರು ಈ ಎಲ್ಲಾ ಧೋರಣೆಗಳನ್ನು ತೀಕ್ಷ್ಣ ಟೀಕೆಗೆ ಗುರಿಪಡಿಸಲು ಪ್ರೇರಣೆ.

ಸಮಾವೇಶ ಅಂಗೀಕರಿಸಿದ ನಿರ್ಣಯಗಳು ಕೆಲವು ಇವು–ಸಮಸ್ತ ದುಡಿಯುವ ಜನತೆ ಸದಾ ಹೆಚ್ಚುತ್ತಿರುವ ಬೆಲೆಯೇರಿಕೆಯ ಹೊರೆ ಹಾಗೂ ನಿರುದ್ಯೋಗಗಳಿಂದ ಬಳಲುತ್ತಿದ್ದಾರೆ.

ಸರಕಾರ ವೇತನ ವ್ಯವಸ್ಥೆಯನ್ನು "ತರ್ಕಸಮ್ಮತ" ಗೊಳಿಸುವ ವಿಚಾರವನ್ನು ಆಕ್ರಾಮಕ ರೀತಿಯಲ್ಲಿ ಹೇಳುತ್ತಲಿದೆ. ಅದರರ್ಥ ಸ್ವಲ್ಪ ಹೆಚ್ಚಿರುವ ವೇತನವನ್ನು ಕೆಳಮಟ್ಟಕ್ಕಿಳಿಸುವುದು. ಹಣದುಬ್ಬರ ತಡೆಯುವ ಹೆಸರಲ್ಲಿ ತುಟ್ಟಿಭತ್ಯ, ಬೋನಸ್ ಮುಂತಾದ ಕಾರ್ಮಿಕರ ಆದಾಯವನ್ನು ಕಮ್ಮಿಮಾಡಲು ಅಥವಾ ಸ್ತಂಭನಗೊಳಿಸಲು ಪ್ರಯತ್ನಿಸಲಾಗುತ್ತಿದೆ.

ಹಣಕಾಸು ಸಚಿವಾಲಯದ ಅಧೀನವಿರುವ 'ಸಾರ್ವಜನಿಕ ಉದ್ದಿಮೆಗಳ ಬ್ಯೂರೋ' ಕಾರ್ಮಿಕರ ವೇತನ ಸ್ತಂಭನಗೊಳಿಸುವ ನಿರ್ದೇಶನಗಳನ್ನು ಸಾರ್ವಜನಿಕ ವಲಯದ ಆಡಳಿತವರ್ಗಗಳಿಗೆ ನೀಡಿದೆ. ಸ್ವಾಭಾವಿಕವಾಗಿಯೇ, ಖಾಸಗೀ ಮಾಲಕರೂ ಇದರಲ್ಲಿ ಹಿಂದೆ ಬಿದ್ದಿಲ್ಲ.

ಕಾಂಟ್ರಾಕ್ಟ್ ಕೂಲಿಗಳು, ವಲಸೆ ಕೂಲಿಗಳು, ದುಡಿಯುವ ಮಹಿಳೆಯರು ಹಾಗೂ ಕೂಲಿಮಕ್ಕಳ ಸ್ಥಿತಿ ವರ್ಣಿಸಲಸಾಧ್ಯ.

ಯೋಗ್ಯ ಪ್ರತಿಫಲದ ಬೆಲೆಕೊಡಬೇಕೆಂಬ ರೈತರ ಹೋರಾಟಗಳನ್ನು, ಹೆಚ್ಚು ಕೂಲಿಕೊಡಬೇಕೆಂಬ ಕೃಷಿ ಕಾರ್ಮಿಕರ ಹೋರಾಟಗಳನ್ನು ನಿರ್ದಯವಾಗಿ ಬಗ್ಗುಬಡಿಯಲಾಗುತ್ತಿದೆ.

ದುಡಿಯುವ ಜನತೆಯಲ್ಲಿ ತೀವ್ರವಾಗಿ ಹರಡುತ್ತಿರುವ ಅತೃಪ್ತಿ ಹಾಗೂ ಬಲಗೊಳ್ಳುತ್ತಿರುವ ಅವರ ಪ್ರತಿರೋಧಗಳನ್ನು ಎದುರಿಸಬೇಕಾಗಿ ಬಂದ ಸರಕಾರ ಹಾಗೂ ಮಾಲೀಕರು ಟ್ರೇಡ್‌ಯೂನಿಯನ್ ಹಕ್ಕುಗಳು ಹಾಗೂ ಹೋರಾಟಗಳ ಮೇಲೆ ಹತಾಶರಾಗಿ ದಾಳಿ ನಡೆಸುತ್ತಿದ್ದಾರೆ.

ರಾಷ್ಟ್ರೀಯ ಭದ್ರತಾ ಶಾಸನವನ್ನು ಟ್ರೇಡ್‌ಯೂನಿಯನ್ ಕಾರ್ಯಕರ್ತರು ಹಾಗೂ ಮುಷ್ಕರ ನಿರತ ಕಾರ್ಮಿಕರ ವಿರುದ್ಧ ಪ್ರಯೋಗಿಸುವುದಿಲ್ಲ ಎಂಬ ಭರವಸೆಗೆ ವ್ಯತಿರಿಕ್ತವಾಗಿ ಅದನ್ನು ನಾಚಿಕೆಯಿಲ್ಲದೆ ಉಪಯೋಗಿಸಲಾಗುತ್ತಿದೆ. ಒಂದಾದಮೇಲೊಂದರಂತೆ ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಲ್ಲಿ ಮುಷ್ಕರಗಳನ್ನು ನಿಷೇ

(ಕಡೇ ಪುಟ ನೋಡಿ)

ಜನವರಿ 19ರಂದು ನಡೆಯಲಿರುವ ಅಖಿಲಭಾರತ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಿ

ಬೆಳಕು ಹರಿಯಿತು

-ನಿರಂಜನ

ಈ ಕಥೆಯನ್ನು ಹೆಣೆದವರು ಖ್ಯಾತ ಸಾಹಿತಿ ನಿರಂಜನ ಅವರು. ಕಥೆಗೆ ಪ್ರೇರಣೆ ಜೋಷುವಾ ಖುನ್ಜ್ ಬರೆದ 'ಡಾನ್ ಓವರ್ ಸಮರ್ಕಂಡ' ಎಂಬ ಕೃತಿಯಲ್ಲಿ ನಿರೂಪಿತವಾದ ಒಂದು ಘಟನೆ.

ಆದಿಲ್‌ಷಾಹಿ ಆಳಿದ ಬಿಜಾಪುರದಲ್ಲಿ ಕಳೆದ ವರ್ಷದ ಕೊನೆಯ ಭಾಗದಲ್ಲಿ ಸಾಮಾಜಿಕ ಅಸಮಾನತೆಯ ವಿರುದ್ಧ ಕಿಡಿಯೊಂದು ಸಿಡಿಯಿತು. ಆ ಕಿಡಿಯೇ ನಜ್ಮಾಭಾಂಗಿ.

ಚಲನಚಿತ್ರ ನೋಡುವುದು ಅಪರಾಧ ಎಂಬ ಧಾರ್ಮಿಕ ಮತಾಂಧರ ಕಟ್ಟಳೆಯನ್ನು ನಜ್ಮಾ ಧಿಕ್ಕರಿಸಿದಳು. ಜ್ಯೂನಿಯರ್ ಕಾಲೇಜೊಂದರಲ್ಲಿ ಅಧ್ಯಾಪಕಿಯಾಗಿದ್ದ ನಜ್ಮಾಳನ್ನು ಆ ಸ್ಕೂಲಿನ ಆಡಳಿತವರ್ಗ ಸಸ್ಪೆಂಡ್ ಮಾಡಿತು. ನಾಡಿನ ಪ್ರಗತಿಪರರ ಒತ್ತಾಯಕ್ಕೆ ಮಣಿದು ಕೊನೆಗೆ ನಜ್ಮಾಳನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲಾಯಿತು.

ಇತಿಹಾಸದುದ್ದಕ್ಕೂ ಪ್ರಗತಿಯ ಗಾಲಿಯನ್ನು ಹಿಂದಕ್ಕೆ ತಳ್ಳುವ ಯತ್ನ ನಡೆಯುತ್ತಲೇ ಇದೆ. ಮುಸ್ಲಿಂರಲ್ಲಿ ಮಾತ್ರವಲ್ಲ, ಎಲ್ಲ ಧರ್ಮಗಳಲ್ಲೂ ಮತಾಂಧರ ವಿರುದ್ಧ ಹೋರಾಟವೂ ನಡೆಯುತ್ತಲೇ ಇದೆ.

ಇರಾನಿನ ಖೋಮೇನಿ ನಾಡಿನಲ್ಲಿ ಹೆಂಗಳೆಯರಿಗೆ ಸ್ವಚ್ಛ ಗಾಳಿಯನ್ನು ಸೇವಿಸಲು ಅವಕಾಶ ಕೊಡದೇ ಧರ್ಮದ ಹೆಸರಿನಲ್ಲಿ ದಬ್ಬಾಳಿಕೆ ನಡೆಯುತ್ತಿದೆ.

ಧರ್ಮ ಗ್ಲಾನಿಯಾದಾಗ ಯುಗಯುಗಕ್ಕೊಮ್ಮೆ ಪರಮಾತ್ಮ ಅವಿರ್ಭವಿಸುವ ಈ ಪುಣ್ಯಭೂಮಿ(?)ಯೂ ಇದಕ್ಕೆ ಹೊರತಲ್ಲ.

ನಜ್ಮಾ, ಎಲ್ಲ ಧರ್ಮಗಳ ಮೌಢ್ಯಕ್ಕೆ ಒಂದು ಸವಾಲು. ಜನರನ್ನು ಧರ್ಮದ ಮೌಢ್ಯದಲ್ಲಿ ಅನುಗಾಲ ಇಡಲಾಗಿದೆಯೆಂಬುದಕ್ಕೆ ನಜ್ಮಾ ಪ್ರಕರಣ ಒಂದು ದೃಷ್ಟಾಂತ.

ಶತಮಾನಗಳ ಹಿಂದೆ ಕುಂಟ ತೈಮೂರನಾಳಿದ ಸಮರ್ಕಂಡ ಪ್ರದೇಶದಲ್ಲೂ ಹೆಂಗಳೆಯರು ಹೀನಾಯಮಾನ ಪರಿಸ್ಥಿತಿಯಲ್ಲೇ ಜೀವಿಸುತ್ತಿದ್ದರು.

64 ವರ್ಷಗಳ ಹಿಂದೆ ಆ ಪ್ರದೇಶದಲ್ಲಿ ಒಂದು ಗಮನಾರ್ಹ ಬದಲಾವಣೆಯುಂಟಾಯಿತು. ವಿಶ್ವದಲ್ಲೇ ಮೊಟ್ಟಮೊದಲ ಬಾರಿಗೆ ಶ್ರಮಜೀವಿ ವರ್ಗದ ಅಧಿಕಾರ ಅಲ್ಲಿ ಸ್ಥಾಪಿತವಾಯಿತು.

ಆ ಘಳಿಗೆಯಿಂದಲೇ ಮಾನವನ ಸರ್ವತೋಮುಖ ಅಭಿವೃದ್ಧಿಗೆ ಅಲ್ಲಿ ಅವಿರತ ಯತ್ನ ನಡೆಯಿತು.

ವಿಶ್ವದಲ್ಲೊಂದು ಹೊಂಬೆಳಕನ್ನು ಮೂಡಿಸಿದ ಮಹಾನ್ ಅಕ್ಟೋಬರ್ ಕ್ರಾಂತಿ ಪೂರೈಸಿದ ಆರಂಭದ ವರ್ಷಗಳಲ್ಲಿ ಸಮರ್ಕಂಡದ ಮಹಿಳೆ 'ಖೋಸಿಯತ್' ಮೌಢ್ಯದ ವಿರುದ್ಧ ಸಿಡಿದೆದ್ದಳು.

ಆ ಖೋಸಿಯತ್‌ಳ ಕಥೆ ಇಲ್ಲಿದೆ :

ಖೋಸಿಯತ್ !

ಮಧ್ಯ ವಯಸ್ಸನ್ನು ಸಮೀಪಿಸಿದ್ದ ತಾಯಿ ಯೋಚಿಸಿದಳು-ಇನ್ನು ಹೆರವುದುಂಟೆ? ತಂದೆಯೇನೋ ಗಡ್ಡ ತೀಡುತ್ತಾ "ಅಲ್ಲಾ! ನೋಡು ನೋಡು, ಕಣ್ಣು ಬಿಟ್ಟಾಗಲೇ ಅಳುತ್ತಿದ್ದಾಳೆ. ಆಡಿನಂತೆ" ಎಂದ. ಮತ್ತೆ, "ಒಂದು ಗಂಡು ಒಂದು ಹೆಣ್ಣು-ಪುನಃ ಈ ಹೆಣ್ಣು, ಇನ್ನೂ ನಾಲ್ಕಾರೂ ಗಂಡು ಹೆರಬೇಕು ನೋಡು!" ಎಂದು ರಾಗವೆಳೆದ. ಕೂಸು ಅಳತೊಡಗಿತು. ಕೆಟ್ಟ ಹುಡುಗಿ!- ಎಂದು ತಾಯಿ ಮನಸ್ಸಿನಲ್ಲೆ ಶಪಿಸಿದಳು. "ಬಾ-ಬಾ" ಎಂದು ಶಕ್ತಿಯುಡುಗಿದ್ದ ಸ್ವರದಲ್ಲಿ ಬಹು ಮೆಲ್ಲನೆ ಮಗುವನ್ನು ಬರಸೆಳೆದು ಸಂತೈಸಿದಳು. ತಂದೆ ಮಂಚದ ಮೇಲೆ ಬಾಗಿದ. ಆ ಗಡ್ಡ-ಕಣ್ಣುಗಳನ್ನು ನೋಡಿ ಕೂಸು ಮತ್ತಷ್ಟು ಗಟ್ಟಿಯಾಗಿ ಕಿರುಚಿತು. ಥೂ-ಥೂ ಎಂದು ತಂದೆ ಹೊರ ಹೋದ ತಿರುತಿರುಗಿ ನೋಡುತ್ತಾ.

ಕೂಸು ಬೆಳೆದು ಕುಮಾರಿ ಖೋಸಿಯತ್ ಚಪಲ-ಮುದ್ದಾದ ಹುಡುಗಿಯಾದಳು.

ತಂದೆ ನೇಕಾರ, ದೈವಭಕ್ತ. ಹಿರಿಯಣ್ಣ ಹಿಟ್ಟು ತಯಾರಿಸುವ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ. ತಾಯಿ ಮನೆಗೆಲಸವಾದ ಮೇಲೆ ಬಿಡುವಿದ್ದಾಗಲೆಲ್ಲ ಜಮಖಾನೆ ಹೆಣೆಯುತ್ತಿದ್ದಳು; ಟೊಪ್ಪಿಗೆ ಹೊಲಿಯುತ್ತಿದ್ದಳು. ಅಕ್ಕ ಅವಳಿಗೆ ನೆರವಾಗುತ್ತಿದ್ದಳು. ಖೋಸಿಯತ್ ಓಡಿಯಾಡುತ್ತಿದ್ದಳು. "ಖೋಸಿಯತಾ, ಬೀದಿಯಲ್ಲಿ ಆಡಬಾರದು ಕಣೇ; ಮನೆಯೊಳಗೇ ಇರು" ಎನ್ನುತ್ತಿದ್ದಳು ತಾಯಿ ಆಗಾಗ್ಗೆ.

ಬಾಗಿಲಿಂದ ಹೊರಗಿಣುಕಬೇಕಾದರೆ ತಾಯಿ ತನ್ನ ಮುಖಕ್ಕೆ ಮುಸುಕು ಹಾಕಿಕೊಳ್ಳುತ್ತಿದ್ದಳು. "ಯಾಕಮ್ಮ ಹೀಗೆ? ಗುಮ್ಮನ (ದೆವ್ವದ) ಹಾಗೇ ಕಾಣುತ್ತೀಯೆ!" ಎಂದು ಕುತೂಹಲದಿಂದ ಖೋಸಿಯತ್ ಕೇಳುವುದಿತ್ತು ಒಮ್ಮೊಮ್ಮೆ. ಅಕ್ಕನೂ ಅವಕುಂಠನ ಹಾಕಿಕೊಂಡಾಗ ಅವಳ ಕುತೂಹಲ ಕಿಡಿಗೇಡಿತನವಾಯಿತು. "ಆ ಕಪ್ಪು ಕೊಳಕು ದೊರಗು ಬಟ್ಟೆಯನ್ನು ಹರಿದುಹಾಕುತ್ತೇನೆ ನೋಡು" ಎನ್ನುವಳು. 'ನೋಡಮ್ಮ' ಎಂದು ಅಕ್ಕ ದೂರುಕೊಟ್ಟಾಗ ಅಮ್ಮ ಗದರಿಸುವಳು. ಕೋಣೆಯ ಮೂಲೆಗೆ ಹೋಗಿ, ಗೋಡೆಗೆ ಮುಖ ಮಾಡಿ, ಖೋಸಿಯತ್ ಅಳುವಳು.

ಈ ಮಧ್ಯೆ ತಾಯಿಗೆ ಗರ್ಭಸ್ರಾವವಾಯಿತು. ಹೆಣ್ಣುಮಕ್ಕಳಿಬ್ಬರಿಗೂ ಅದು ತಿಳಿಯದು. ತಾಯಿ ಕೋಣೆಯಲ್ಲಿ ಅಸ್ವಸ್ಥ ಬಿದ್ದಿದ್ದಳು. ತಂದೆಯ ನಮಾಜು ಕೊನೆಯಿಲ್ಲದೇ ನಡೆದಿತ್ತು. ಅಣ್ಣ ಜೋಲು ಮೋರೆಯಿಂದ ಕೆಲಸಕ್ಕೆ ಹೋಗುತ್ತಿದ್ದ. ಬೇನೆಯಿಂದೆದ್ದಾಗ ತಾಯಿ ಅಪರಾಧಿನಿಯಂತೆ ನಡೆಯತೊಡಗಿದಳು. ಗಂಡಸಿಗಾಗಿ ಮತ್ತೊಂದು ಗಂಡುಕೂಸನ್ನು ಹಡೆಯುವುದಕ್ಕಾಗಲಿಲ್ಲವಲ್ಲ!... ಖೋಸಿಯತ್ ತಂದೆಯ ಗಡ್ಡದ ಮೇಲೆ ಬೆರಳೋಡಿಸಿದಾಗ, "ನಿನಗೊಬ್ಬ ತಮ್ಮ ಬರ್ತಾನೆ ಖೋಸಿಯತಾ, ಬಂದೇ ಬರುತ್ತಾನೆ. ನಾನಿನ್ನೂ ಮುದುಕನಾಗಿಲ್ಲ. ಇನ್ನೂ 'ಇಲ್ಲ'" ಎನ್ನುತ್ತಿದ್ದ ಆತ. ಖೋಸಿಯತಾಳಿಗೆ ಏನೂ ಅರ್ಥವಾಗುತ್ತಿರಲಿಲ್ಲ.

ಏಕಾಂಗಿನಿಯಾಗಿ ದಿನ ನೂಕುವುದು ಹುಡುಗಿಗೆ ಕಷ್ಟವಾಗುತ್ತಿತ್ತು; ಹಾಗೂ ಹೀಗೂ ಹೊತ್ತು ಕಳೆಯಬೇಕಾಗಿತ್ತು.

ಆದರೆ ಅವಳ ಏಳನೆಯ ವಯಸ್ಸಿನಲ್ಲಿ ಹೊಸ ಕೂಸು ಬಂತು. ಬಡಕಲು ಬಡಕಲಾದ ಗಂಡುಮಗು. "ಅಮ್ಮಾ, ನಿನ್ನ ಹೊಟ್ಟೆಯಿಂದ ಬಂತೆ? ಆಗಲಿ ಆಡುವುದಕ್ಕಾಯಿತು." ಎಂದಳು ಖೋಸಿಯತ್, ಆನಂದದಿಂದ ತುಂಬಿತ್ತು ತಂದೆಯ ಹೃದಯ.

ಮರು ವರುಷ ಸಂಭ್ರಮದ ವರುಷ. ಅಣ್ಣನಿಗೂ ಅಕ್ಕನಿಗೂ ಮದುವೆ. ಆ ಬಡವರ ಮನೆಯಲ್ಲೂ ತಿಂಡಿಗಳ ತಯಾರಿ ನಡೆದಿತ್ತು.

"ಮದುವೆಯೆಂದರೆ ಬಹಳ ಜನ ಬರುತ್ತಾರೆಯೇ?" ಎಂದು ಕೇಳುವಳು ಖೋಸಿಯತ್. ಅಕ್ಕ ಉತ್ತರ ಕೊಡಲೊಲ್ಲಳು; ಹೂಂ-ಉಹೂಂ ಎನ್ನುವುದಕ್ಕೂ ಅಮ್ಮನಿಗೆ ಬಿಡುವಿರಲಿಲ್ಲ.

ಮದುವೆಯ ದಿನ ಮುಂಜಾನೆ ಖೋಸಿಯತ್ ಎದ್ದಾಗ ತಾಯಿ ಸಿದ್ಧವಾಗಿದ್ದಳು, ಹೊಸದೊಂದು ಚಿಕ್ಕ "ಪರಂಜ" (ಬುರುಕಿ)ದೊಡನೆ.

"ಅತ್ತಿಗೆ ಬರುತ್ತಾಳೆ; ಭಾವ ಬರುತ್ತಾನೆ-ತೊಟ್ಟುಕೋ ಕಂದಾ ಇದನ್ನು."

"ನಾನೇ? ಅಯ್ಯೋಮ್ಮಾ! ಮದುವೆಯಲ್ಲವೆ ಇವತ್ತು? ಬಂದವರನ್ನೆಲ್ಲ ನೋಡಬೇಡವೇ? ಆಡಬೇಡವೇ?

"ಶುರುವಾಯಿತು ಇವಳದು" ಎಂದು ಗೊಣಗಿದಳು ತಾಯಿ. ತೊಟ್ಟುಕೊಳ್ಳೇ ಒಮ್ಮೆ!"

ಅಳಲು ಸಿದ್ಧವಾಗಿ "ನೀನೆ ತೊಟ್ಟುಕೊ!" ಎಂದಳು ಖೋಸಿಯತ್. ತಾಯಿ ಹೊಡೆಯಲು ಕೈ ಎತ್ತಿದಳು. ಓ ಹೋ ಓ-ಎಂದು ಗೋಳಾಟಕ್ಕೆ ಮೊದಲಾಯಿತು. ತಾಯಿ ಹೊರಹೋಗಿ ತಂದೆ ಓಡಿ ಬಂದ. ಒಂದು ಮಾತು, ಎರಡು ಮಾತು, ಮತ್ತೆ ಆಚೆಗೂ ಈಚೆಗೂ ಏಟು. ಬಾಗಿಲೆಳೆದುಕೊಂಡು ಸರಪಣಿ ತಗಲಿಸಿ ತಂದೆ ಹೊರಟುಹೋದ.

ಹೊರಗೆ ಮದುವೆಯ ಗದ್ದಲ ನಡೆದಿತ್ತು. ಒಳಗೆ ಖೋಸಿಯತ್‌ಳ ಅಳು. ಒಮ್ಮೆ ಸುಮ್ಮನಾಗುವಳು. ತಿರುಗಿ ಅಳುವಳು; ಪುನಃ ಸುಮ್ಮನಾಗುವಳು......ಮೂಲೆಯಲ್ಲಿ ತೊಟ್ಟಿಲಲ್ಲಿದ್ದ ಒಂದು ವರ್ಷದ ಮಗುವೂ ಅದೇ ಕೆಲಸ ಮಾಡುತ್ತಿತ್ತು. ಖೋಸಿಯತ್ ಹತ್ತಿರ ಹೋಗಿ ಅದನ್ನೇ ನೋಡಿದಳು. ಹೊಡೆದು ಸಾಯಿಸಿಬಿಡೋಣವೇ? ಎನ್ನಿಸಿತು. ಆದರೆ ಅದು ತನ್ನ ಕೂಸಲ್ಲವೇ? ಬುರುಕಿಯನ್ನೆಳೆದು ತಂದು ತೊಟ್ಟಿಲ ಬಳಿ ಹಾಸಿ, ಮಗುವನ್ನೇ ನೋಡುತ್ತ ಕುಳಿತಳು, ಅಲ್ಲೇ ಜೊಂಪು ಹತ್ತಿತು.

ಮಧ್ಯಾಹ್ನ ತಾಯಿ ಕದ ತೆರೆದು ನೋಡಿದಾಗಲೂ ಮಗಳು ನಿದ್ರಿಸಿದ್ದಳು. ಎಬ್ಬಿಸಿ ಏನು ಮಾಡೋಣ? "ಪರಂಜ" ಹಾಕಿಕೊಳ್ಳದೇ ಜನರನ್ನು ಇಣುಕಿ ನೋಡುವಂತಿರಲಿಲ್ಲ. ಸದ್ದಾಗದಂತೆ ಮಗುವಿಗೆ ಮೊಲೆಯೂಡಿಸಿ, ಮಗಳಿಗೊಂದಿಷ್ಟು ತಿಂಡಿ ತಂದಿಟ್ಟು ತಾನು ಕದ ಮುಚ್ಚಿಕೊಂಡಳು.

'ಖೋಸಿಯತ್' ಎದ್ದಾಗ ಮಗು ಮಲಗಿತ್ತು. 'ಅಮ್ಮಾ! ಅಮ್ಮಾ!' ಎಂದು ಕೂಗಿದಳು ಎರಡು ಬಾರಿ. ತಿಂಡಿಯ ತಟ್ಟೆ ಕಣ್ಣಿಗೆ ಬಿತ್ತು. ಒಂದು ಖರ್ಜೂರದ ಹಣ್ಣನ್ನೆತ್ತಿ ಬಾಯಿಗಿಟ್ಟು 'ಥೂ' ಎಂದಳು. ರೊಟ್ಟಿ ರುಚಿಸಲಿಲ್ಲ. ಒಂದು ತುಂಡನ್ನು ತೆಗೆದು ತೊಟ್ಟಿಲಿಗೆಸೆದು "ತಿನ್ನು-ತಿನ್ನೋ!" ಎಂದಳು ಮಗುವಿಗೆ. ಅದು ಎಚ್ಚತ್ತು ಅಳತೊಡಗಿತು. ನಿಸ್ಸಹಾಯಳಾಗಿ ಮೂಕಳಾದಳು ಖೋಸಿಯತ್.

ಸಂಜೆಯಾಯಿತು. ರಾತ್ರಿಯಾಯಿತು. ಬೆಳಗಾಗುವ ಮುಂಚೆಯೇ ತಾಯಿ ಬಂದೆಬ್ಬಿಸಿದಳು. ಅವಳ ಕಯ್ಯಲ್ಲೊಂದು ಕಂದೀಲು ಇತ್ತು. ಅಕ್ಕ ಮಗುವನ್ನು ಮುಟ್ಟಿ, ಖೋಸಿಯತಾಳನ್ನು ಮುದ್ದಿಟ್ಟು, ಅಳುತ್ತಳುತ್ತ ಧಡಧಡನೆ ಹೊರಟು ಹೋದಳು. ಮೊದಲು ಅವಾಕ್ಕಾಗಿದ್ದ ಖೋಸಿಯತ್ ಬಳಿಕ, "ನಾನು ಉಪವಾಸ ಬಿದ್ದಿದ್ದರೆ ಇವಳು ಅಳಬೇಕೆಂದು ಹೇಳಿದವರು ಯಾರು?" ಎಂದಳು. ಹೊರಗೆ ಕಟಕಟ ಎಂದು ಗಾಡಿಯ ಸದ್ದಾಗುತ್ತಿತ್ತು.

ಬೆಳಗಾದಾಗ ತಾಯಿಯೂ ಅಳುತ್ತಿದ್ದುದು ಕಂಡಿತು. ಇವರಿಗೆಲ್ಲ ಏನಾಗಿದೆ? ತನ್ನನ್ನು ಯಾರೂ ಕೇಳುವವರಿಲ್ಲವೆ? ತಡೆಯಲಾರದ ಹಸಿವು ಬೇರೆ. ಬಲವಾಗಿ ರೋಧಿಸತೊಡಗಿದಳು ಖೋಸಿಯತ್. ತನ್ನ ಕಣ್ಣೀರನ್ನೊರಸುತ್ತ ತಾಯಿ ಮಗಳನ್ನೆತ್ತಿಕೊಂಡು "ಅಳಬೇಡ ಕಂದಾ! ಅವಳು ಹೋದಳು-ಇನ್ನು ನೀನೊಬ್ಬಳೇ!" ಎಂದಳು ಬಿಕ್ಕಿ ಬಿಕ್ಕಿ.

"ಹೌದಮ್ಮ-ನಾನೊಬ್ಬಳೇ! ಊಟ ಬೇಡವೆ? ಆ ಪರಂಜ ಹಾಕಿಕೊಳ್ಳಲೇ ಬೇಕೆ?"

...ಖೋಸಿಯತ್ ಊಟ ಮಾಡಿದಳು. "ಪರಂಜ" ಧರಿಸಿಕೊಳ್ಳಲೂ ಬೇಕಾಯಿತು!

"ನೋಡು ಖೋಸಿಯತಾ, ನೀನು ಸುಂದರಿ. ಈ ಮೂಗು, ಈ ಕಣ್ಣು, ಈ ರೂಪ! ಬೆಕ್ (ಜಮೀನ್ದಾರ) ಅಧಿಕಾರಿಯು ಜನರ ಕಣ್ಣಿಗೆ ಬಿದ್ದರೆ ಅವರು ಹಿಡಿದು ಕೊಂಡೊಯ್ಯುತ್ತಾರೆ! ಪರಂಜ ಹಾಕಿಕೊಳ್ಳಲೇ ಬೇಕು".

ಖೋಸಿಯತ್ ಅಂಜಿದಳು. ಬೆಕ್ ಹುಡುಗಿಯನ್ನು ವಿಷ ಮಾಡುತ್ತಾನೆಂದು ಅವಳಿಗೆ ಗೊತ್ತಿರಲಿಲ್ಲ. ಆದರೆ ಅವನ ಅರಮನೆಯಲ್ಲಿ ಹೆಚ್ಚು ಹುಡುಗಿಯರು ಸಾಯುತ್ತಾರೆಂದು ಅಕ್ಕ ತಿಳಿಸಿದ್ದಳು. ಖೋಸಿಯತಾ ಮುಸುಕು ಧರಿಸಿದಳು. ಆ ಸಂಜೆ, ಅವಕುಂಠನದ ಅತ್ತಿಗೆಯನ್ನು ಅಣ್ಣ ಕರೆತಂದ. ಕತ್ತಲೆ ಕವಿದಿತ್ತು ಆಗಲೆ.

ಕತ್ತಲೆಯಷ್ಟೇ ಅಲ್ಲ, ಅಜ್ಞಾನವೂ ಆ ಊರನ್ನು ಕವಿದಿತ್ತು. ಪಶ್ಚಿಮದ ಯುರೋಪಿನತ್ತ ಘೋರ ಜಾಗತಿಕ ಯುದ್ಧ ಮೊದಲಾಗಿತ್ತೆಂಬ ಸುದ್ದಿ ಮಧ್ಯ ಏಷ್ಯದ ಆ ಫರ್ಗಾನಾ ಬೆಟ್ಟಗಾಡಿಗೆ ಬಂದು ತಲುಪಿರಲಿಲ್ಲ.

o o o o

ಒಂಬತ್ತು ಹತ್ತು ವರ್ಷವಾಯಿತು ವಯಸ್ಸು. ಮ್ಲಾನ ಮುಖ; ಹಿಂದಿನ ಗೆಲವಿರಲಿಲ್ಲ. ಆದರಲ್ಲಿ ಘೋಷಾ ಧರಿಸುವುದು ಅವಳಿಗೆ ಅಭ್ಯಾಸವಾಗಿತ್ತು. ಓರಿಗೆಯವರಿಲ್ಲದೆ ಅವಳೊಬ್ಬಳೇ ಬೆಳೆಯುತ್ತಿದ್ದಳು.

ಅತ್ತಿಗೆಯೂ ಒಂದು ಹೆಣ್ಣು ಕೂಸನ್ನು ಹೆತ್ತಾಗ ಈ ಮುಗ್ಧೆಗೆ ಹೆದರಿಕೆಯಾಯಿತು. "ಪರಂಜ" ತೊಟ್ಟುಕೊಂಡವರಿಗೆಲ್ಲ ಹೀಗೆಯೇ ಆಗುವುದೆ? ಆದರೆ ಮರುಕ್ಷಣದಲ್ಲೆ ಆಕೆ, ತನಗೆ ಮದುವೆಯಾಗಿಲ್ಲವಲ್ಲ-ಎಂದು ಸಮಾಧಾನಪಟ್ಟುಕೊಳ್ಳುವಳು.

(ಮುಂದುವರಿಯುವುದು)

ರಾಜೀವ ಪಟ್ಟಾಭಿಷೇಕ

ಎನ್. ಕೆ. ಉಪಾಧ್ಯಾಯ

"ಆಕಾಶದಿಂದ ಜಾರಿ, ಭೂಮಿಗೆ ಬಂದ ನೋಡಿ. ನಮಗಾಗಿ ಆ ದೇವನೇ, ನಮಗಾಗಿ ಮಹಾದೇವನೇ" ಎಂಬ ಹಾಡನ್ನು ನೀವು ಕೇಳಿದ್ದು "ಜನ್ಮ ಜನ್ಮದ ಅನುಬಂಧ" ಚಿತ್ರದಲ್ಲಿ. ಅದನ್ನು ಸಾಕ್ಷಾತ್ಕಾರಮಾಡಿ ತೋರಿಸಿದವರು ನಮ್ಮ ರಾಜ್ಯದ ಮುಖ್ಯಮಂತ್ರಿ ಗುಂಡೂರಾಯರು. ಶ್ರೀ ಕೃಷ್ಣ ಪರಮಾತ್ಮ ಯಾವ ರೀತಿ ತನ್ನ ಎದೆಸೀಳಿ ಇಡೀ ಬ್ರಹ್ಮಾಂಡವನ್ನೇ ತೋರಿಸಿ ಅರ್ಜುನನನ್ನು ಚಕಿತಗೊಳಿಸಿದನೋ, ಗುಂಡೂರಾಯರು ಕೂಡ ತನ್ನೆದೆಯಲ್ಲಿ ಸಿಕ್ಕಾಒತ್ತಿ ರಾಜೀವಗಾಂಧಿಯನ್ನು ಪ್ರದರ್ಶಿಸಿ ಅವರನ್ನೇ ಆಶ್ಚರ್ಯಗೊಳಿಸಿದ್ದಾರೆ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನ ಅಸ್ತು ಹಸ್ತ ಅರ್ಜುನನ ತಲೆಯ ಮೇಲಾದರೆ, ಬೆಂಗಳೂರು ಯುವ ಕಾಂಗ್ರೆಸ್ ಮೇಳದ ಪ್ರತಿಫಲದ ಅಮೃತ ಹಸ್ತ ಗುಂಡೂರಾಯರ ಕುರ್ಚಿಯ ಮೇಲೆ. ರಾಯರು ಹಾಡಿದರು–"ಆಕಾಶದಿಂದ ಜಾರಿ ಭೂಮಿಗೆ ಬಂದ ನೋಡಿ. ನನಗಾಗಿ ಮಹಾದೇವನೇ" ಆಕಾಶದಿಂದ ಜಾರಿದ್ದು ಎಫ್. ಎಂ. ಖಾನರ ಅಲಂಕೃತ ವಿಮಾನವಲ್ಲಲ್ಲ, ಕೆ.ಜೆ. ಜಾರ್ಜರ ಜೀಪಿನಲ್ಲಿ. ಕಲಿಯುಗದ ಮಹಿಮೆ ನೋಡಿದಿರಾ.

"ಯುವ ಕಾಂಗ್ರೆಸ್ ಜನ ಎದೆಯುಬ್ಬಿಸಿ-ಭುಜ ಅಲುಗಿಸಿ-ಕೈ ಹಾರಿಸಿ "ಐತಿಹಾಸಿಕ"ವೆಂದು ಬಣ್ಣಿಸಿದ ಯುವ ಕಾಂಗ್ರೆಸ್ ರಾಷ್ಟ್ರೀಯ ಮೇಳ ಪ್ರಧಾನಿ ಪುತ್ರ ರಾಜೀವಗಾಂಧಿಯವರ ನಾಯಕ ಪೀಠಾರೋಹಣದಲ್ಲಿ ಇಂದು ಯಶಸ್ವಿಯಾಗಿ ಮುಕ್ತಾಯಗೊಂಡಿತು" ಪ್ರಜಾವಾಣಿ ವರದಿ.

ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಮುಂದಿನ ರಾಜಕೀಯ ಪ್ರಭುಗಳಾಗುವ ಆಸೆ ಹೊತ್ತಿರುವ ಈ ಯುವ ಕಾಂಗ್ರೆಸ್ ನಾಯಕ ಗಣ ರಾಜಕೀಯ ತತ್ವ ವಿಚಾರಗಳ ಬಗ್ಗೆ ತಲೆಕೆಡಿಸಿಕೊಂಡಿರುವಂತೆ ಕಂಡಿಲ್ಲ. ರಾಜೀವ್‌ಗೆ ರಾಜಕೀಯ ನಿಷ್ಠೆ ತೋರಿಸುವುದೊಂದೇ ತಾವು ಮಾಡಬೇಕಾದ ಕೆಲಸವೆಂದು ನಂಬಿದ ಜನ ಇವರೆಲ್ಲ" (ಪ್ರಜಾವಾಣಿ).

ಬೆಂಗಳೂರಿನಲ್ಲಿ ವೈಭವದಿಂದ ರಾಜೀವ ಪಟ್ಟಾಭಿಷೇಕ ನಡೆಯುತ್ತಿದ್ದಂತೆಯೇ, ಪೋಲೀಸರು ಹೊಡೆದು ಸಾಯಿಸಿದರೆಂದು ಆಪಾದಿಸಿರುವ ನೆಲಮಂಗಲ ತಾಲ್ಲೂಕಿನ ಎಲಚಗೆರೆ ಗ್ರಾಮದ 31 ವರ್ಷದ ಯುವಕ ನಂಜೇಗೌಡನ ಮೃತ ದೇಹ ಮುಗಿಲಿಗೆ ಮುಖಮಾಡಿ ರಾಜೀವ್ ಮಹಾದೇವ ಮುಗಿಲಿನಿಂದ ಜಾರಿ ಬರುತ್ತಿರುವುದನ್ನು ರೆಪ್ಪೆ ಅಲುಗಾಡಿಸದೆ ನೋಡುತ್ತಲೇ ಇರುವ ದೃಶ್ಯ–ಹೃದಯದ್ರಾವಕವಾಗಿತ್ತು. ಜೀವಂತ ಮನುಷ್ಯರಿಗೆ ಇದರರ್ಥವಾಗಲಿಲ್ಲ. ಆದರೆ ಮೈಸೂರಿನಿಂದ ವಿಶೇಷವಾಗಿ ಬೆಂಗಳೂರಿಗೆ ತರಲಾದ "ಲೀಲಾ" ಆನೆಗೆ ಮಾತ್ರ ಇದರರ್ಥವಾಗಿ ರಾಜೀವ್‌ಗಾಂಧಿಗೆ ಹೂಹಾರ ಅರ್ಪಿಸಲು ನಿರಾಕರಿಸಿತು. ದುಃಖದುಮ್ಮಾನಗಳ ಮಧ್ಯೆ ಹೂಹಾರಾರ್ಪಣೆಯೇ? ಎಂಥ ನಾಚಿಕೆಗೇಡು! ಆನೆ ಲೀಲಾಳ ಆಕ್ರೋಶ. ಕಾಂಗ್ರೆಸ್ ಯುವಕರಿಗೆ ದಾರಿದೀಪವಾಗಲಿಲ್ಲ.

ಛಿದ್ರಕಾರಕ ಶಕ್ತಿಗಳಿಗೆ ಹೊರಗಿನ ಶಕ್ತಿಗಳು ಪ್ರೋತ್ಸಾಹ ನೀಡುತ್ತಿರುವುದರ ಬಗ್ಗೆ ರಾಜೀವ್‌ಗಾಂಧಿಯವರು ಎಚ್ಚರಿಕೆ ನೀಡಿದರು. ಆದರೆ ಆ ಛಿದ್ರಕಾರಿ ಶಕ್ತಿಗಳು ಯಾವುದೆಂಬುದನ್ನು ಸ್ಪಷ್ಟೀಕರಿಸಲಿಲ್ಲ. ವಿದೇಶಿ ಕ್ರಿಶ್ಚಿಯನ್ ಮಿಶನರಿಗಳು ಅಸ್ಸಾಂ ಮತ್ತಿನ್ನಿತರ ಈಶಾನ್ಯ ಪ್ರದೇಶದಲ್ಲಿ ವಿಛಿದ್ರಕಾರಿ ಧಾಳಿ ನಡೆಸುತ್ತಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಎತ್ತಿ ತೋರಿಸುತ್ತಿದ್ದರೂ ಕೂಡ, ರಾಜೀವ್‌ಗಾಂಧಿ ಪಕ್ಷ, ಕಾಂಗ್ರೆಸ್ ಯುವಕರು ಈ ಮಿಶನರಿಗಳ ಆಮಿಷಕ್ಕೆ ಬಲಿಬಿದ್ದು ಪ್ರತ್ಯೇಕತಾ ಚಳುವಳಿಯಲ್ಲಿ ಪಾಲುಗಾರರಾಗಿರುವುದನ್ನು ನೋಡುತ್ತಿದ್ದೇವೆ. ವಿರೋಧಿ ಪಕ್ಷಗಳ ಮೇಲೆ ವಿಷಕಾರಿದ ರಾಜೀವ್ ಗಾಂಧಿ ಈ ವಿಛಿದ್ರಕಾರಿ ಶಕ್ತಿಗಳನ್ನು ಹೆಸರಿಡಲೂ ಹೆದರುತ್ತಿರುವುದಲ್ಲದೆ, ಕಳೆದೆರಡು ಮೂರು ವರ್ಷಗಳಿಂದ ಅಸ್ಸಾಂ ರಾಜ್ಯವನ್ನು ಛಿದ್ರಕಾರಿ ಶಕ್ತಿಗಳಿಂದ, ಮುಕ್ತಗೊಳಿಸಲು ಸಾಧ್ಯವಾಗದಿರುವುದನ್ನು ವಿವರಿಸಲು ತಪ್ಪಿದ್ದಾರೆ. ಜಾತ್ಯಾತೀತ ಧ್ಯೇಯ, ರಾಷ್ಟ್ರೀಯ ಭಾವೈಕ್ಯ ಸಾಧನೆ ಹಾಗೂ ಕೋಮು ಸೌಹಾರ್ದಕ್ಕೆ ಶ್ರಮಿಸಿ ದೇಶವನ್ನು ದುರ್ಬಲಗೊಳಿಸುತ್ತಿರುವ ಛಿದ್ರಕಾರಿ ಶಕ್ತಿಗಳು ಮತ್ತು ಪ್ರತ್ಯೇಕತಾವಾದಿಗಳ ವಿರುದ್ಧ ಹೋರಾಡುವ ನಿರ್ಧಾರ ಯುವ ಕಾಂಗ್ರೆಸ್ ಸಮ್ಮೇಳನದಲ್ಲಿ ಸ್ವೀಕರಿಸಲಾಯಿತು. ಹೈದರಾಬಾದಿನಲ್ಲಿ ಜಾತೀಯವಾದಿ ಜಮಾಯತ್-ಎ-ಇಸ್ಲಾಂ ಸಮ್ಮೇಳನಕ್ಕೆ ಇಂದಿರಾಗಾಂಧಿ ಶುಭ ಸಂದೇಶ ಕಳುಹಿಸಿರುವುದು, ಕೇರಳದಲ್ಲಿ ಆರ್. ಎಸ್. ಎಸ್. ಜೊತೆ ಸೇರಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಕಾರ್ಯಕರ್ತರನ್ನು ಕೊಲೆಮಾಡುತ್ತಿರುವುದು, ಅಸ್ಸಾಂನಲ್ಲಿ ಕ್ರಿಶ್ಚನ್ ಮಿಶನರಿ, ಮತ್ತಿನ್ನಿತರ ಜಾತೀಯ ಶಕ್ತಿಗಳ ಜೊತೆ ಸೇರಿ ಪ್ರತ್ಯೇಕತಾ ಚಳುವಳಿಗೆ ಪ್ರೋತ್ಸಾಹ ನೀಡುತ್ತಿರುವುದು, ದೇಶದಲ್ಲಿ ಎಡ ಶಕ್ತಿಗಳನ್ನು ಮುರಿಯಲು ಭಾರತೀಯ ಜನತಾ ಪಾರ್ಟಿಯ ಸಹಾಯ ಪಡೆಯುವುದು (ಕೇರಳ, ಘರವಾಲ್ ಚುನಾವಣೆ)- ಈ ನೀತಿಗಳ ವಿರುದ್ಧವೂ ಯುವ ಕಾಂಗ್ರೆಸ್ ಹೋರಾಡುವುದೇ? ಉತ್ತರ ಇಲ್ಲ.

ದೇಶದ ಹಿಂಸಾಚಾರ, ಹಿಂಸಾಚಾರ, ಅಸಮರ್ಥ ಆಡಳಿತೆಗೆಲ್ಲ ವಿರೋಧಿ ಪಕ್ಷದವರೇ ಮುಖ್ಯ ಕಾರಣವೆಂದು ಪದೇಪದೇ ಹೇಳಿದ ರಾಜೀವ್‌ಗಾಂಧಿ ಮತ್ತು ಹಲವಾರು ಮಂತ್ರಿಗಳಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಈ ಮುಂಬರುವೆಯೇ ಸವಾಲೊಡ್ಡಿತ್ತು. ಅಸ್ಸಾಂ ಸಮಸ್ಯೆ ಪರಿಹಾರಕ್ಕೆ ಅಡ್ಡ ಬರುವವರಾರು? ಈಶಾನ್ಯ ಗಡಿಯಲ್ಲಿ ಸಾಮ್ರಾಜ್ಯಶಾಹಿಗಳ ವಿದೇಶೀಯರ ಕುತಂತ್ರಕ್ಕೆ ಬೆಂಬಲಕೊಡುತ್ತಿರುವವರಾರು? ಹಿಂದೂ-ಶೀಖ ಜಗಳ, ಕಲಿಸ್ತಾನ ರಾಜ್ಯದ ಬೇಡಿಕೆಗಾಗಿ ಚಳುವಳಿ ಹೂಡುವವರು ವಿರೋಧಿ ಪಕ್ಷದವರೇ? ಕೈಯ್ಯಲ್ಲಿ ಬಂದೂಕುಧಾರಿಗಳಾಗಿ ಪಾಟ್ನಾ ನಗರದಲ್ಲಿ ಭೂಮಾಲಕರ ಮೆರವಣಿಗೆ, ಪ್ರತಿವಾರ ಹರಿಜನರ, ಹಿಂದುಳಿದವರ ಕೊಲೆ–ಸುಲಿಗೆಗೆ ಯಾರು ಕಾರಣ. 1981ರ 9 ತಿಂಗಳಲ್ಲಿ ಉತ್ತರ ಪ್ರದೇಶದಲ್ಲಿ ದರೋಡೆಖೋರರು 4281 ಜನರ ಕೊಲೆ ಮಾಡಿದರು; ದರೋಡೆಖೋರರೆನ್ನುವವರು ಘಾತುಕ ಅಸ್ತ್ರಧಾರಿಗಳಾಗಿ ಹಳ್ಳಿಗಳಲ್ಲಿ ದರೋಡೆಮಾಡುವ, ಕೊಲೆಮಾಡುವ ಪ್ರಕರಣಗಳು ರಾತ್ರಿಹಗಲೆನ್ನದೆ ನಡೆದಿವೆ. ಚುನಾವಣೆಯಲ್ಲಿ ಧನಸಹಾಯ ಮಾಡಿದ್ದಕ್ಕಾಗಿ ಅಭಿನಂದನೆ ಸಲ್ಲಿಸುವ ಇಂದಿರಾ ಕಾಂಗ್ರೆಸ್ ವಿಧಾನಸಭೆ ಸದಸ್ಯರ ಪತ್ರಗಳು ದರೋಡೆಖೋರರ ಕಿಸೆಯಲ್ಲಿ ದೊರಕಿವೆ. ಉತ್ತರ ಪ್ರದೇಶದ ದೀವ್‌ಹಳ್ಳಿಯಲ್ಲಿ 24 ಹರಿಜನ ಕುಟುಂಬವನ್ನು, ಎಳೆಮಕ್ಕಳನ್ನು ಹೆಂಗಸರನ್ನು ಕಡಿದು ಚೂರು ಚೂರು ಮಾಡಿ ಚೆಲ್ಲಿದವರಾರು. ಬೆಂಗಳೂರಿನ ಕಾಂಗ್ರೆಸ್ ಯುವಕರ ಮೇಳದಲ್ಲಿ ಹಳ್ಳಿಯ ಬಡವರ ಸೇವೆ ಮಾಡಲು ಕಾಂಗ್ರೆಸ್ ಯುವಕರು ಶ್ರಮಿಸಬೇಕೆಂದು ಕರೆ ಕೊಡುತ್ತಿರುವಾಗಲೇ ಉತ್ತರ ಪ್ರದೇಶದ ಸದೀಪುರ ಗ್ರಾಮದಲ್ಲಿ ಐವರು ಮಹಿಳೆಯರೂ ಸೇರಿದಂತೆ ಹತ್ತು ಹರಿಜನರ ಕಗ್ಗೊಲೆ. ಹೀಗೆ ರಾಜೀವ ಗಾಂಧಿಯ ಪಕ್ಷ, ಆಡಳಿತೆ ನಡೆಸುತ್ತಿರುವ ಪ್ರತಿಯೊಂದು ರಾಜ್ಯದಲ್ಲೂ ಕಾಯಿದೆ ಕಾನೂನೇ ಇಲ್ಲದಂಥ ಪರಿಸ್ಥಿತಿ ಹಬ್ಬಿರುವಾಗ, ಹೆಂಗಸರಿಗೆ, ಮಕ್ಕಳಿಗೆ, ಹರಿಜನ-ಗಿರಿಜನರಿಗೆ ಸಂರಕ್ಷಣೆಯೇ ಇರದಂಥ ಗಂಭೀರ ಪರಿಸ್ಥಿತಿ ನೆಲೆಸಿರುವಾಗ, ಕಲ್ಕತ್ತಾದಲ್ಲಿ ರಾಜೀವ್ ತಾಯಿ ಇಂದಿರಾ ಗಾಂಧಿ; ಬೆಂಗಳೂರಿನಲ್ಲಿ ಇಂದಿರಾ ಮಗ ರಾಜೀವ ಗಾಂಧಿ ಅವರು ಬಡವರ ರಕ್ತದಿಂದ ಹೆಪ್ಪುಗಟ್ಟಿದ ನಾಲಗೆಯಿಂದ ವಿರೋಧಿ ಪಕ್ಷಗಳಿಗೆ ಬೈಯ್ಯುವ-ಹೀಯಾಳಿಸುವ ಕರ್ತವ್ಯದಲ್ಲಿ ತೊಡಗಿರುವುದು ಹೇಸಿಗೆತನವಲ್ಲದೆ ಮತ್ತೇನು?

ವಿರೋಧಿ ಪಕ್ಷಗಳು ರಚನಾತ್ಮಕವಾಗಿ ವರ್ತಿಸದೆ, ವಿನಾಶಕಾರಿ ಪ್ರವೃತ್ತಿ ಹಿಡಿದಿವೆ ಎಂದು ಹೇಳಿದ ರಾಜೀವಗಾಂಧಿ "ದೇಶದ ಮುನ್ನಡೆಗೆ ಎಲ್ಲರೂ ರಚನಾತ್ಮಕವಾಗಿ ಮುಂದುವರಿಯಬೇಕು" ಎಂದರು.

ಭೂ ಸುಧಾರಣೆಯಾಗಿ, ಭೂಹೀನ ರೈತರಿಗೆ ಭೂಮಿಯ ಹಕ್ಕು ಸಿಗಬೇಕು, ಭೂಮಾಲೀಕರ ಹೆಚ್ಚುವರಿ ಭೂಮಿಯನ್ನು ಭೂಹೀನರಿಗೆ ಪುಕ್ಕಟೆಯಾಗಿ ಹಂಚಬೇಕು, ಸರಕಾರಿ ಪಡಭೂಮಿ ಸಣ್ಣ ರೈತರಿಗೆ, ಭೂಹೀನರಿಗೆ ಧರ್ಮಾರ್ಥ ಕೊಡಬೇಕು, ಕೃಷಿ ಕೂಲಿಗಾರರಿಗೆ ಹೆಚ್ಚಿನ ಕೂಲಿ, ಮಾನವರಾಗಿ ಬಾಳಲಿಕ್ಕೆ ವ್ಯವಸ್ಥೆ, ಕಾರ್ಮಿಕರಿಗೆ ನ್ಯಾಯಪಗಾರ, ರೈತರ ಬೆಳೆಗೆ ನ್ಯಾಯ ಬೆಲೆ, ಬಂಡವಾಳಶಾಹಿಗಳ ಸುಲಿಗೆಯಿಂದ ಕಾರ್ಮಿಕರಿಗೆ ರಕ್ಷಣೆ ಇವು ರಚನಾತ್ಮಕ ಬೇಡಿಕೆಗಳಲ್ಲವೇ? ರಾಜೀವಗಾಂಧಿ ಪಕ್ಷದ ಸರಕಾರ ಕರ್ನಾಟಕದಲ್ಲಿ ರೂ. 2ರಿಂದ ರೂ. 5 ರವರೆಗಷ್ಟೇ ದಿನಕೂಲಿ ಕೊಡುತ್ತಿರುವಾಗ, ಪ. ಬಂಗಾಲದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖ್ಯತ್ವದ ಎಡರಂಗ ಸರಕಾರ ರೂ. 7 ರಿಂದ 15ರವರೆಗೆ ಕನಿಷ್ಟ ಕೂಲಿ ನಿರ್ಧರಿಸಿದೆ. ರೈತರಿಗೆ, ಪಾಲುಗಾರರಿಗೆ, ಗೇಣಿದಾರರಿಗೆ ಭೂಮಿ ಹಕ್ಕು ಒಡೆತನ ಕೊಟ್ಟಿದೆ. ಅತ್ಯಾವಶ್ಯಕ ವಸ್ತುಗಳ ವಿತರಣೆಗೆ ಯೋಗ್ಯ ವ್ಯವಸ್ಥೆ ಮಾಡಿದೆ, ಕಾರ್ಮಿಕರ ಹೋರಾಟದಲ್ಲಿ ಪೋಲೀಸರ ಕೈವಾಡ ತಡೆಹಿಡಿದಿದೆ, ಜಾತೀಯ ಸೌಹಾರ್ದತೆ ಕಾಪಾಡಿದೆ, ವಿದ್ಯಾರ್ಥಿಗಳನ್ನು ವಿಶ್ವಾಸದಲ್ಲಿ ತೆಗೆದುಕೊಂಡು, ಶಿಕ್ಷಣದಲ್ಲಿ ಕ್ರಾಂತಿಕಾರಿ ಬದಲಾವಣೆ ಮಾಡಿ, ಯಾವ ಗಲಾಟೆಯಿಲ್ಲದೇ ಸಕಾಲದಲ್ಲಿ ಪರೀಕ್ಷೆಗಳು ನಡೆಯುವಂತೆ, ವೇಳೆಗೆ ಸರಿಯಾಗಿ ಪರಿಣಾಮಗಳು ಸಾರಲ್ಪಡುವಂತೆ ಮಾಡಿದೆ. ಪ. ಬಂಗಾಲ, ಕೇರಳ, ತ್ರಿಪುರಾ ಸರಕಾರಗಳ ಜನಹಿತ ಕಾರ್ಯಗಳೆಲ್ಲಿ, ರಾಜೀವ ಕಾಂಗ್ರೆಸ್ಸಿನ ರಾಜ್ಯಗಳಲ್ಲಿ ಜನವಿರೋಧಿ ಆಳ್ವಿಕೆಯೆಲ್ಲಿ!

ಕಾಂಗ್ರೆಸ್ಸಿನ 20 ಅಂಶ ರಾಜೀವನ 5ಅಂಶ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ವಿರೋಧಿ ಪಕ್ಷಗಳು ತೊಡಕಾಗಿವೆಂದು ರಾಜೀವ ಹಾಗೂ ಇತರ ಯುವ–ಹಿರಿಯ ಮುಖಂಡರೆಲ್ಲ ಆಪಾದಿಸಿದರು. ಇದಕ್ಕೆ ಉತ್ತರ ರಾಜೀವ ಗಾಂಧಿಗೆ ಸಿಕ್ಕಿದೆ. ಕೆಲವು ತಿಂಗಳ ಹಿಂದೆ ಅಮೇಥಿ ಮತಕ್ಷೇತ್ರದಲ್ಲಿ ರಾಜೀವನನ್ನು ಲಕ್ಷಾವಧಿ ಮತಗಳ ಅಂತರದಿಂದ ಆರಿಸಿತಂದ ಉತ್ತರ ಪ್ರದೇಶದ ಜನತೆ ಹೋದವಾರ ಸಾಗರದಲ್ಲಿ ನಡೆದ ಉಪ ಚುನಾವಣೆಯಲ್ಲಿ, ಮೂರು ದಿವಸ ರಾಜೀವ ಗಾಂಧಿಯವರು ಆ ಮತ ಕ್ಷೇತ್ರದಲ್ಲಿ ಮತಯಾಚನೆ ಮಾಡಿದರೂ ಕೂಡ, ಜನತೆ ಅವರ ಮೇಲೆ ವಿಶ್ವಾಸವಿಡದೆ, ವಿರೋಧಿ ಪಕ್ಷವಾದ ಬಿ. ಜೆ. ಪಿ. ಉಮೇದ್ವಾರರನ್ನು ಆರಿಸಿದರು. 25 ಅಂಶಗಳ ಕಾರ್ಯಕ್ರಮಗಳಿಗೆ ಆತಂಕ ಒಡ್ಡುವವರು ವಿರೋಧಿ ಪಕ್ಷಗಳಲ್ಲ- ಬಂಡವಾಳಶಾಹಿ-ಭೂಮಾಲಕರ ಹಿತ ಸಾಧಿಸುವ ತನ್ನಮ್ಮನ ಕಾಂಗ್ರೆಸ್ ಮತ್ತು ಅದರ ಸರಕಾರವಷ್ಟೇ ಅಲ್ಲದೆ, ದಂಡ್ಡು, ಅಧಿಕಾರದ ಆಮಿಷಗೆ ಬಲಿಯಾಗುತ್ತಿರುವ ತನ್ನ ಬೆಂಬಲಿಗರೆಂಬುದನ್ನು ಅರಿತುಕೊಳ್ಳಲು ಬಹುತೇಕ ರಾಜೀವ ಗಾಂಧಿಯವರಿಗೆ ಇನ್ನೂ ಕಾಲಾವಕಾಶ ಬೇಕಾದೀತು.

ವಿಮಾನ ಚಾಲಕ ವೃತ್ತಿಬಿಟ್ಟು ಧರೆಗಿಳಿದ ಈ ಮಹಾದೇವ, ತಲೆತಲಾಂತರದಿಂದ ಭೂಮಿತಾಯಿಯ ಮಡಿಲಲ್ಲೇ ತಮ್ಮ ಜೀವನವನ್ನೆಲ್ಲ ನುಗ್ಗು ಮಾಡಿಕೊಳ್ಳುತ್ತಿರುವ ರೈತರಿಗೆ ಬುದ್ಧಿ ಹೇಳಲು ಹೊರಟಿದ್ದಾರೆ. "ರೈತ ಗೋಧಿ ಬೆಲೆ ಹೆಚ್ಚಿಸಲು ಕೇಳುವ ಬದಲು ಹೆಚ್ಚು ಉತ್ಪಾದಿಸಿ ಆದಾಯ ಹೆಚ್ಚಿಸಿಕೊಳ್ಳುವಂತೆ ಮಾಡಿ" ಎಂದು ತನ್ನ ಬೆಂಬಲಿಗರಿಗೆ ಹೇಳಿದ್ದಾರೆ. ಎಂಥ ಸಂಕಷ್ಟಗಳಿದ್ದರೂ ಕೂಡ ರೈತ ಮಿತಿಮೀರಿ ಬೆಳೆಯಲು ಆತುರಪಡುತ್ತಾನೆ. ಹೆಚ್ಚು ಬೆಳೆದು ಲಾಭ ಹೆಚ್ಚುಗಳಿಸಬೇಕೆಂಬ ಆಕಾಂಕ್ಷೆ ಅವನಿಗಿಲ್ಲದಿಲ್ಲ. ಆದರೆ 30 ವರ್ಷದ ಕಾಂಗ್ರೆಸ್ ಆಡಳಿತೆಯಲ್ಲಿ ರೈತನ ಬೆನ್ನೆಲುಬು ಮುರಿಯುವ ನೀತಿಯನ್ನೆ ತನ್ನ ಅಜ್ಜ ಮತ್ತು ಅವ್ವ ಅನುಸರಿಸಿಕೊಂಡು ಬಂದಿದ್ದಾರೆ. ಮಧ್ಯಮ– ಸಣ್ಣ ರೈತರಿಗೆ ಒಕ್ಕಲತನ ಲಾಭದಾಯಕವಾಗಿಲ್ಲ. ಅವರು ಉಪಯೋಗಿಸುತ್ತಿರುವ, ವಿದ್ಯುತ್, ಡೀಜಲ್, ಗೊಬ್ಬರ, ನೀರು, ಉಳುವ ಸಲಕರಣೆಗಳೂ ಹಾಗೆಯೇ ಅವರು ದಿನನಿತ್ಯ ಉಪಯೋಗಿಸುವ ಬಟ್ಟೆ, ಎಣ್ಣೆ ಮುಂತಾದುವೆಲ್ಲ ದುಬಾರಿಯಾಗಿದ್ದು ತಾನು ಬೆಳೆದ ಬೆಳೆಗೆ ನ್ಯಾಯಬೆಲೆ ಸಿಗದೆ ಕಂಗಾಲಾಗಿರುವ ವಿಷಯ ವಿಮಾನದಲ್ಲಿ ತಿರುಗಾಡುವಾಗ ತಿಳಿಯುವುದು ಕಷ್ಟವಲ್ಲವೇ? ಅದು ತಿಳಿಯದ್ದರಿಂದಲೇ "ಹೆಚ್ಚು ಬೆಲೆ ಬೇಡುವುದು ಸರಿಯಲ್ಲ, ಉತ್ಪಾದನೆ ಹೆಚ್ಚಿಸು" ಇದೇ ಸುಲಿಯುವವರ್ಗದ ನೀತಿ, ಅದನ್ನರಿಯಲು ರಾಜೀವಗೆ ಭೀತಿ. ರಾಜೀವನ ಪಟ್ಟಾಭಿಷೇಕ ಬೆಂಗಳೂರಿನ ಅರಮನೆ ಹೂದೋಟದಲ್ಲಾಗದೆ, ನರಗುಂದ-ನವಲಗುಂದ ನಡುವಿನ ಹೊಲದಲ್ಲಾಗುತ್ತಿದ್ದರೆ, ರೈತರ ಊಟವನ್ನೇ ತಿನ್ನಿಸುತ್ತಿದ್ದರೆ, ಬಡಕಲು ರೈತ ಮಕ್ಕಳೇ ಜಯಘೋಷ ಮಾಡಿ ಹಾರಹಾಕುತ್ತಿದ್ದರೆ, ಅವರ ಕಷ್ಟ-ಕಾರ್ಪಣ್ಯಗಳ ಕಹಿ ಅನುಭವ ಯುವ ಕಾಂಗ್ರೆಸ್ ಮುಖಂಡರಿಗಾಗುತ್ತಿತ್ತು.

ಹನ್ನೊಂದು ವರ್ಷಗಳ ಹಿಂದೆ ಇಂದಿರಾಗಾಂಧಿಯನ್ನು ಅಗ್ರ ದೇಶದ ನಾಯಕಿಯಾಗಿ ಮಾಡಿರುವುದು ಬೆಂಗಳೂರಿನ ಗಾಜಿನ ಮನೆ. 11 ವರ್ಷದ ನಂತರ ಇಂದಿರಾ ಮಗ ರಾಜೀವನನ್ನು ಯುವ ಕಾಂಗ್ರೆಸ್ಸಿಯ ಪಟ್ಟಕ್ಕೇರಿಸಿ ರಾಷ್ಟ್ರ ನೇತನನ್ನಾಗಿ ಮಾಡಿದ್ದು ಬೆಂಗಳೂರಿನ ಅರಮನೆ ಆವಾರದಲ್ಲಿ.

(6ನೇ ಪುಟ ನೋಡಿ)

ಅಂತರರಾಷ್ಟ್ರೀಯ ಹಣಕಾಸು ನಿಧಿಯ ಕುರಿತು

ಭಾರತವು ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ 5 ಬಿಲಿಯನ್ ಡಾಲರ್‌ಗಳ ದೊಡ್ಡ ಮೊತ್ತದ ಸಾಲವನ್ನು ಪಡೆಯುತ್ತಿದೆ. ಇದು ಸ್ವಾತಂತ್ರ್ಯ ಬಂದಾಗಿನಿಂದೀಚೆಗೆ ಭಾರತವು ತೆಗೆದುಕೊಂಡಿರುವ ಪ್ರಮುಖ ನಿರ್ಧಾರವಾಗಿದೆ. ಆದರೆ ನಿಧಿಯು ವಿಧಿಸಿರುವ ಹಾಗೂ ಭಾರತ ಸರ್ಕಾರ ಒಪ್ಪಿಕೊಂಡಿರುವ ಷರತ್ತುಗಳನ್ನು ಬಹಿರಂಗಗೊಳಿಸಿಲ್ಲ. ಈ ಸಾಲದ ಹಣಕ್ಕಾಗಿ ಭಾರತವು ತೆರುತ್ತಿರುವ ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರ್ಯಗಳ ಬೆಲೆ ನಮಗಿನ್ನೂ ಮನವರಿಕೆಯಾಗಿಲ್ಲ.

ಐದು ಬಿಲಿಯನ್ ಡಾಲರ್‌ಗಳಷ್ಟು ದೊಡ್ಡ ಮೊತ್ತದ ಸಾಲದ ಬೇಡಿಕೆಯನ್ನು ಈ ಹಿಂದೆ ಭಾರತವು ಎಂದೂ ಐ.ಎಂ.ಎಫ್. ಮುಂದೆ ಇಟ್ಟಿರಲಿಲ್ಲ. ಈ ಸಾಲವನ್ನು ಪಡೆಯಲು ಸರ್ಕಾರ ಮುಂದೆ ಇಡುತ್ತಿರುವ ಕಾರಣವೆಂದರೆ ಹದಗೆಟ್ಟಿರುವ ವಿದೇಶಿ ವಿನಿಮಯ ಕೊರತೆ. ಆದರೆ ಈ ಕಾರಣಕ್ಕಾಗಿ ಸಾಲವನ್ನು ಪಡೆಯಬೇಕಾಗಿರಲಿಲ್ಲ. ವಿದೇಶಿ ವಿನಿಮಯ ಕೊರತೆ ಸಮಸ್ಯೆಯನ್ನು ಸರಿಪಡಿಸಿಕೊಳ್ಳಲು ಸಾಧ್ಯವಿರುವ ಅನೇಕ ಪರಿಹಾರಗಳಲ್ಲಿ ಐ.ಎಂ.ಎಫ್. ಸಾಲವೂ ಒಂದು. ಆದರೆ ಬೇರೆ ಎಲ್ಲ ಸಾಧ್ಯತೆಗಳನ್ನು ಬದಿಗಿಟ್ಟು ಈ ಸಾಲವನ್ನೇ ಏಕೆ ಪಡೆಯಬೇಕೆಂದು ವಿವರಣೆ ನೀಡುತ್ತಿಲ್ಲ. ಜನತೆಯ ಆರ್ಥಿಕ ಜೀವನದ ಮೇಲೆ ತೀವ್ರ ದುಷ್ಪರಿಣಾಮಗಳನ್ನು ಬೀರುವ ಈ ಸಾಲದ ಬಗ್ಗೆ ಸರ್ಕಾರದ ಮೌನ ನಿಜಕ್ಕೂ ಕಳವಳಕಾರಿಯಾಗಿದೆ.

ಜ್ಞಾಪಕಪತ್ರ ಮಂಡನೆ

ಸಂಸತ್ತಿನ ಚಳಿಗಾಲ ಅಧಿವೇಶನ ಪ್ರಾರಂಭದ ದಿನ ಕಾಂ. ಹರಿಕಿಷನ್ ಸಿಂಗ್ ಸೂರ್ಜಿತ್‌ರವರು ಭಾರತ ಸರ್ಕಾರ ಒಪ್ಪಿಕೊಂಡಿರುವ ಜನವಿರೋಧಿ ಷರತ್ತುಗಳನ್ನೊಳಗೊಂಡ ನಿಧಿಯ ಜ್ಞಾಪಕಪತ್ರವನ್ನು ರಾಜ್ಯಸಭೆಯಲ್ಲಿ ಮಂಡಿಸಿದರು. ಪತ್ರ ಒಳಗೊಂಡಿರುವ ಅಂಶಗಳು ಸುಳ್ಳು ಎನ್ನುವುದಾದರೆ ಅದನ್ನು ರುಜುವಾತು ಪಡಿಸಬೇಕೆಂದು ಕಾಂ. ಸೂರ್ಜಿತ್‌ರವರು ಹಾಕಿದ ಸವಾಲನ್ನು ಆಳುವ ಪಕ್ಷದ ಸದಸ್ಯರು ಮತ್ತು ಸರ್ಕಾರ ಸ್ವೀಕರಿಸಲಿಲ್ಲ.

ಸಂಸತ್ತಿನಲ್ಲಿ ಮಂಡಿಸಿದ ಈ ಜ್ಞಾಪಕಪತ್ರವು ಕೇಂದ್ರ ಹಣಕಾಸು ಸಚಿವ ಆರ್. ವೆಂಕಟರಾಮನ್‌ರವರು ಐ.ಎಂ.ಎಫ್. ಮ್ಯಾನೇಜಿಂಗ್ ಡೈರೆಕ್ಟರ್ ಅವರಿಗೆ ಸಾಲಕೋರಿ ಬರೆದಿರುವ ಪತ್ರ, ಸರ್ಕಾರ ಅನುಸರಿಸುತ್ತಿರುವ 'ಆರ್ಥಿಕ ನೀತಿಯನ್ನು ಕುರಿತ ಹೇಳಿಕೆ' ಮತ್ತು ಇನ್ನಿತರ ದಾಖಲೆ ಪತ್ರಗಳನ್ನು ಒಳಗೊಂಡಿದೆ.

ಸಂಪೂರ್ಣ ಶರಣಾಗತಿ

ಐ.ಎಂ.ಎಫ್.ನಿಂದ ಸಾಲಪಡೆಯಲು ಅದು ಹಾಕಿರುವ ಎಲ್ಲ ಷರತ್ತುಗಳನ್ನು ಭಾರತ ಸರ್ಕಾರ ಒಪ್ಪಿಕೊಂಡಿದೆ. ಪರಿಣಾಮವಾಗಿ ಸ್ವತಂತ್ರವಾದ ರಾಷ್ಟ್ರೀಯ ಆರ್ಥಿಕ ಹಾಗೂ ಸಾಮಾಜಿಕ ನೀತಿಗಳನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನು ಭಾರತವು ಸಂಪೂರ್ಣವಾಗಿ ಐ.ಎಂ.ಎಫ್.ಗೆ ಮಾರಿಕೊಂಡಿದೆ. ಸಾಮ್ರಾಜ್ಯಶಾಹಿಗಳ ಈ ಷಡ್ಯಂತ್ರದ ಸಾಧ್ಯತೆಗಳ ಬಗ್ಗೆ ಸಿ.ಪಿ.ಐ.(ಎಂ.) ಮೊದಲಿನಿಂದಲೂ ಹೇಳುತ್ತಿದ್ದು ಈ ಭಾರಿ ಮೊತ್ತದ ಸಾಲದೊಂದಿಗೆ ಇದು ನಿಜವಾಗಿದೆ.

“ಭಾರತವು ಈ ಸಾಲಪಡೆಯುವ ಅವಧಿಯಲ್ಲಿ ನಿರಂತರವಾಗಿ ನಿಧಿಯೊಡನೆ ಸಮಾಲೋಚನೆಯಲ್ಲಿ ತೊಡಗಿರಬೇಕು”, “ಜ್ಞಾಪಕಪತ್ರದಲ್ಲಿ ರೂಪಿಸಿರುವ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ನಡೆದಿರುವ ಪ್ರಗತಿಯ ಬಗ್ಗೆ ನಿಧಿಗೆ ಬೇಕಾದ ಮಾಹಿತಿಯನ್ನು ಒದಗಿಸಬೇಕು” ಮುಂತಾದ ಷರತ್ತುಗಳನ್ನು ಜ್ಞಾಪಕಪತ್ರವು ನಿಚ್ಚಳವಾಗಿ ಹೇಳಿದೆ. ಇದಲ್ಲದೆ ಸಾಲದ ಅವಧಿ ಮುಗಿದ ನಂತರವೂ ಇನ್ನುಳಿದ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಭಾರತ ಸರ್ಕಾರವು ನಿಧಿಯೊಡನೆ ಸಮಾಲೋಚನೆ ನಡೆಸಬೇಕಾಗಿದೆ.

ಈ ಸಾಲವು ನಿರ್ದಿಷ್ಟವಾದ ಮತ್ತು ನಿಗದಿತ ಅವಧಿಯೊಳಗೆ ಮುಗಿಸಬೇಕಾದ ಕಾರ್ಯಕ್ರಮಗಳಿಗೆ ಮಾತ್ರ ಮೀಸಲಾಗಿದೆ. ಈ ನಿರ್ದಿಷ್ಟ ಉದ್ದೇಶಗಳಲ್ಲಿ ಪ್ರಮುಖವಾದುದೆಂದರೆ ಖಾಸಗಿ ಕ್ಷೇತ್ರದಲ್ಲಿ ಬಂಡವಾಳದ ಹೂಡಿಕೆ ಮತ್ತು ಉತ್ಪಾದನೆಯನ್ನು ಹೆಚ್ಚಿಸುವುದಾಗಿದೆ. ಇದುವರೆಗೆ ಭಾರತ ಸರ್ಕಾರ ಅನುಸರಿಸಿಕೊಂಡು ಬರುತ್ತಿರುವ ನೀತಿಗೆ ಇದು ವಿರುದ್ಧವಾಗಿದೆ. ದೇಶಿಯ ಮಾರುಕಟ್ಟೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಉತ್ಪಾದಿಸುತ್ತಿದ್ದ ನಮ್ಮ ಅರ್ಥವ್ಯವಸ್ಥೆಯು ಇನ್ನು ವಿದೇಶಿ ಮಾರುಕಟ್ಟೆಯನ್ನು ಗಮನದಲ್ಲಿರಿಸಿಕೊಳ್ಳಬೇಕಾಗಿದೆ. ಇದಕ್ಕೆ ಅನುಗುಣವಾಗಿ 70ರ ದಶಕದಲ್ಲಿ ರೂಪಿತವಾದ 'ಆಮದು ವ್ಯವಹಾರವನ್ನು ಸಡಿಲಗೊಳಿಸುವ' ನೀತಿಯನ್ನು ಪ್ರೋತ್ಸಾಹಿಸಬೇಕಾಗಿದೆ.

ಪೈಪೋಟಿಯ ಮೂಲಕ ದಕ್ಷತೆಯನ್ನು ಹೆಚ್ಚಿಸಲು ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ಧಾರಾಳ ಪ್ರವೇಶ ನೀಡುವುದು, ದೇಶಿಯ ಕೈಗಾರಿಕೆಗಳಿಗೆ ನೀಡುತ್ತಿರುವ ರಕ್ಷಣೆಯನ್ನು ಹಿಂತೆಗೆದುಕೊಳ್ಳುವುದು, ಇದುವರೆಗೆ ಬಹಿಷ್ಕರಿಸಿದ್ದ ಮತ್ತು ತೀವ್ರವಾಗಿ ನಿಯಂತ್ರಿಸಿದ್ದ ವಿದೇಶಿ ಸರಕುಗಳಿಗೆ” ಮುಕ್ತ ಪ್ರವೇಶ ನೀಡುವುದು ಮುಂತಾದ ಷರತ್ತುಗಳನ್ನೊಳಗೊಂಡಿದೆ.

ರಫ್ತನ್ನು ಹೆಚ್ಚಿಸುವುದು

ಸಾಧ್ಯವಿರುವ ಎಲ್ಲ ನಿರ್ಬಂಧಗಳನ್ನು ಕಿತ್ತೊಗೆದು ದೇಶದ ರಫ್ತನ್ನು ಹೆಚ್ಚಿಸುವುದು ಈ ಸಾಲದ ಇನ್ನೊಂದು ಗುರಿಯಾಗಿದೆ. ರಫ್ತು ಸರಕುಗಳ ಉತ್ಪಾದನೆಯನ್ನು ಅಧಿಕಗೊಳಿಸಲು ಈಗ ಜಾರಿಯಲ್ಲಿರುವ ಏಕಸ್ವಾಮ್ಯ ವಿರೋಧಿ ಕಾನೂನುಗಳನ್ನು ಸಡಿಲಗೊಳಿಸುವುದು, ರಫ್ತು ಉತ್ತೇಜಿಸಲು ನೀಡುವ ಇನ್ನಿತರ ಕ್ರಮಗಳೊಂದಿಗೆ ನಗದು ಪರಿಹಾರ ನೀಡುವುದನ್ನು ಸರಳಗೊಳಿಸುವುದು ಮತ್ತು ನಮ್ಮ ರಫ್ತು ಸರಕುಗಳ ಉತ್ಪಾದಕರು ವಿದೇಶಿ ತಾಂತ್ರಿಕ ಜ್ಞಾನವನ್ನು ಧಾರಾಳವಾಗಿ ಬಳಸಲು ಅನುಮತಿ ನೀಡಬೇಕಾಗಿದೆ.

ಇವುಗಳೆಲ್ಲದರ ಪರಿಣಾಮವಾಗಿ ಕೈಗಾರಿಕಾ ಹಾಗೂ ಆರ್ಥಿಕ ಬೆಳವಣಿಗೆಯಲ್ಲಿ ಸರ್ಕಾರದ ಯೋಜಿತ ಮಧ್ಯಪ್ರವೇಶವನ್ನು ನಿರಾಕರಿಸಿದಂತಾಗಿದೆ. ಮತ್ತು ನಮ್ಮ ಕೈಗಾರಿಕಾ ನೀತಿಯನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಅನುಕೂಲವಾಗುವಂತೆ ಸಂಪೂರ್ಣವಾಗಿ ಪರಿಷ್ಕರಿಸಬೇಕಾಗಿದೆ. ಇದರ ನೇರ ಪರಿಣಾಮವೆಂದರೆ ದೇಶಿಯ ಉತ್ಪಾದನಾ ಸಾಮರ್ಥ್ಯದ ಬಳಕೆ ಮತ್ತು ಉದ್ಯೋಗಾವಕಾಶಗಳು ತೀವ್ರವಾಗಿ ಕಡಿತಗೊಳ್ಳುತ್ತವೆ.

ಬಿಗಿಯಾದ ಹಣಕಾಸು ನೀತಿ

ಕೈಗಾರಿಕಾ ನೀತಿಯಲ್ಲಿಲ್ಲದ ಹಣಕಾಸು ನೀತಿಯಲ್ಲೂ ಐ.ಎಂ.ಎಫ್. ಮಧ್ಯಪ್ರವೇಶಿಸುತ್ತಿದೆ. ತನಗೆ ಅನುಕೂಲವಾಗುವ ಹಾಗೆ ಭಾರತದ ಹಣಕಾಸು ನೀತಿಯಲ್ಲೂ ಬದಲಾವಣೆ ತರುವಂತೆ ಒತ್ತಾಯ ತರುತ್ತಿದೆ. ಸಾರ್ವಜನಿಕ ಕ್ಷೇತ್ರದ ಬಂಡವಾಳ ಹೂಡಿಕೆಯ ಮೇಲೆ ಮಿತಿಯ ಹೇರಿಕೆ, ಆರ್ಥಿಕ ಚಟುವಟಿಕೆಗಳಿಗೆ ಬೇಕಾದ ಸಂಪನ್ಮೂಲಗಳನ್ನು ತೆರಿಗೆಯಿಂದ ಹೊರತಾದ ಮತ್ತು ಪರೋಕ್ಷ ತೆರಿಗೆಗಳ ಮೂಲಕವೇ ಕ್ರೋಢೀಕರಿಸಲು ಐ.ಎಂ.ಎಫ್. ನಿರ್ದೇಶನ ನೀಡಿದೆ. ಹಣದುಬ್ಬರ ಮಿತಿಮೀರುತ್ತಿದ್ದು, ಅಧಿಕ ಪರೋಕ್ಷ ತೆರಿಗೆಗಳಿಂದಾಗಿ ನಗರ ಹಾಗೂ ಗ್ರಾಮೀಣ ಪ್ರದೇಶಗಳ ದುಡಿಯುವವರ್ಗವು ನೇರ ಧಾಳಿಗೆ ಒಳಗಾಗುತ್ತದೆ.

ಇವುಗಳಲ್ಲದೆ ಅತ್ಯಂತ ಕಳವಳಕಾರಿಯಾದ ಷರತ್ತುಗಳೆಂದರೆ ರಿಯಾಯಿತಿ ಹೊಂದಿಲ್ಲದ (ವಾಣಿಜ್ಯ) ವಿದೇಶಿ ಸಾಲಗಳ ಮೇಲೆ ಹೇರಿರುವ ಮಿತಿ. ಇದರೊಂದಿಗೆ ಭಾರತವು ವಿದೇಶಿ ವಾಣಿಜ್ಯ ಸಾಲಗಳನ್ನು ಪಡೆಯುವ ಸ್ವಾತಂತ್ರ್ಯವನ್ನು ಕಳೆದುಕೊಂಡಿದೆ. ಬ್ರೆಜಿಲ್‌ನಂತ ಮಿಲಿಟರಿ ಸರ್ವಾಧಿಕಾರಿ ಸರ್ಕಾರವೂ ಈ ಷರತ್ತನ್ನು ವಿರೋಧಿಸಿದ್ದು ಭಾರತವು ಒಪ್ಪಿಕೊಂಡಿದೆ.

ಮತ್ತೊಂದು ಷರತ್ತೆಂದರೆ ಸಮಾಜವಾದಿ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳೊಡನೆ ಭಾರತ ನಡೆಸುತ್ತಿರುವ ದ್ವಿಪಕ್ಷೀಯ ವ್ಯಾಪಾರ ವ್ಯವಹಾರಗಳಿಗೆ ಹಾಕಿರುವ ಮಿತಿ. ಭಾರತವು ಅಧಿಕವಾಗಿ ಅಂತರರಾಷ್ಟ್ರೀಯ ವಾಣಿಜ್ಯ ವ್ಯವಹಾರಗಳನ್ನು ಬೆಳೆಸಿಕೊಳ್ಳಬೇಕಾದ ಈ ಸಂದರ್ಭದಲ್ಲಿ ಭಾರತವು ಕೇವಲ ಅಭಿವೃದ್ಧಿಗೊಂಡ ಬಂಡವಾಳಶಾಹಿ ದೇಶಗಳೊಡನೆ ಮಾತ್ರ ವ್ಯಾಪಾರ ಮಾಡಬೇಕಾಗಿದೆ.

ಈ ಎಲ್ಲ ಷರತ್ತುಗಳನ್ನೊಳಗೊಂಡ ಸಾಲದಿಂದಾಗಿ ಭಾರತವು ಐ.ಎಂ.ಎಫ್.ನ ಕಪಿಮುಷ್ಟಿಯಲ್ಲಿ ಸಿಕ್ಕಿಕೊಳ್ಳುವುದಲ್ಲದೆ ತಾನು ಸ್ವತಂತ್ರವಾಗಿ ಆರ್ಥಿಕ ಸಾಮಾಜಿಕ ನೀತಿಯನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನು ಕಳೆದುಕೊಂಡಿದೆ. ಇವುಗಳೆಲ್ಲದರ ನೇರ ದುಷ್ಪರಿಣಾಮಕ್ಕೆ ಒಳಗಾಗುವುದು ದುಡಿಯುವವರ್ಗ ಎಂಬುದನ್ನೂ ಮರೆಯುವಂತಿಲ್ಲ.

ಐ.ಎಂ.ಎಫ್. ಸಾಲದ ಷರತ್ತುಗಳು

ವಾಷಿಂಗ್‌ಟನ್‌ನಲ್ಲಿ ಈ ಸಾಲಕ್ಕಾಗಿ ನಡೆದಿರುವ ರಹಸ್ಯ ಪತ್ರ ವ್ಯವಹಾರಗಳ ಆಧಾರದ ಮೇಲೆ ಭಾರತದ ಮೇಲೆ ಹೇರಿರುವ ಷರತ್ತುಗಳು ದೃಢಪಟ್ಟಿವೆ.

1) ಬಂಡವಾಳದ ಹೂಡಿಕೆ ಮತ್ತು ಉತ್ಪಾದನೆಯನ್ನು ಖಾಸಗೀ ಕ್ಷೇತ್ರದಲ್ಲಿ ಅಧಿಕಗೊಳಿಸಲು ಕ್ರಮಕೈಗೊಳ್ಳುವುದು.

2) ವಿದೇಶಿ ಸಂಸ್ಥೆಗಳ ಸಹಯೋಗ ಮತ್ತು ಅವುಗಳಿಗೆ ನೀಡುವ 'ರಾಜಧನ'ವನ್ನು ಕುರಿತಂತೆ ಈಗಿನ ನೀತಿಯನ್ನು ಗಮನಾರ್ಹವಾಗಿ ಸಡಿಲಗೊಳಿಸುವುದು.

3) ವಿದೇಶಗಳಿಂದ ಆಮದುಮಾಡಿಕೊಳ್ಳುವುದನ್ನು ಪ್ರೋತ್ಸಾಹಿಸುವುದು.

4) ಆಹಾರ ಮತ್ತಿನ್ನಿತರ ಅಗತ್ಯ ವಸ್ತುಗಳಿಗೆ ನೀಡುವ ಸಬ್ಸಿಡಿಯನ್ನು ಕಡಿತಗೊಳಿಸುವುದು.

5) ಉಳಿತಾಯ ಮತ್ತು ಹೂಡಿಕೆಯನ್ನು ಪ್ರೋತ್ಸಾಹಿಸಲು ನೇರ ತೆರಿಗೆಗಳನ್ನು ಕಡಿಮೆ ಮಾಡುವುದು.

6) ರಫ್ತು ಅಭಿವೃದ್ಧಿಪಡಿಸುವ ಆಧಾರದ ಮೇಲೆ ಆರ್ಥಿಕ ಚಟುವಟಿಕೆಗಳನ್ನು ರೂಪಿಸುವುದು.

7) ಕೈಗಾರಿಕೆ ಹಾಗೂ ಕೃಷಿ ಕ್ಷೇತ್ರದಲ್ಲಿ ಬೆಲೆಗಳನ್ನು ಏರಿಸುವುದು.

8) ಸದ್ಯಕ್ಕಲ್ಲದಿದ್ದರೂ ಅನತಿ ದೂರದಲ್ಲಿ ರೂಪಾಯಿಯನ್ನು ಅಪಮೌಲ್ಯಗೊಳಿಸುವುದು.

ಯಾವುದು ಅಪಪ್ರಚಾರ?

13-12-81ರ ಕೆಂಬಾವುಟ (ಸಿ.ಪಿ.ಐ. ರಾಜ್ಯ ಮಂಡಳಿ ಮುಖಪತ್ರ)ದಲ್ಲಿ "ಕಮ್ಯುನಿಸ್ಟ್ ಪಕ್ಷದ ವಿರುದ್ಧ ಅಪಪ್ರಚಾರ" ಎಂಬ ಶಿರೋನಾಮೆಯಲ್ಲಿ, ನವೆಂಬರ್ 8ರಂದು ಐಕ್ಯರಂಗದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರನ್ನು ಕೊಲೆಮಾಡಿರುವುದಾಗಿ ವರದಿ ಮಾಡಿದ್ದನ್ನು ತಳ್ಳಿಹಾಕಿ ವರದಿಯೊಂದು ಪ್ರಕಟವಾಗಿದೆ. ಐಕ್ಯರಂಗದ ವರದಿ ಸತ್ಯಕ್ಕೆ ದೂರವಾದುದೆಂದೂ, ಕಮ್ಯುನಿಸ್ಟ್ (ಸಿ.ಪಿ.ಐ.) ಪಕ್ಷದ ವಿರುದ್ಧ ಅಪಪ್ರಚಾರ ಮಾಡುವ ಉದ್ದೇಶದಿಂದ ಕೂಡಿದ್ದೆಂದೂ ಕೆಂಬಾವುಟ ವರದಿಮಾಡಿದೆ.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ದಿನದಿನಕ್ಕೆ ವರ್ಧಿಸುತ್ತಿರುವ ಈ ಸಮಯದಲ್ಲಿ ಸಿ.ಪಿ.ಐ. ವಿರುದ್ಧ ಅಪಪ್ರಚಾರ ಮಾಡುವ ಹೀನ ಉದ್ದೇಶ ಐಕ್ಯರಂಗಕ್ಕಿಲ್ಲ. ವಾಸ್ತವ ಸಂಗತಿಗಳು ಐಕ್ಯರಂಗ ನವೆಂಬರ್ 8ರ ವರದಿಗೆ ಆಧಾರ.

ಆಂಧ್ರದ ತಾಡೇಪಲ್ಲಿ ಮತ್ತು ನಂದಿಗ್ರಾಮದಲ್ಲಿ ನಡೆದ ಅಮಾನುಷ ಕೊಲೆಗಳಿಗೆ ತಮ್ಮವರು ಕಾರಣರಾಗಿರುವುದನ್ನು ಸಿ.ಪಿ.ಐ.ನ ನ್ಯೂಏಜ್ ಮತ್ತು ಕೆಂಬಾವುಟಗಳನ್ನು ತಳ್ಳಿ ಹಾಕಿದ್ದು ವಿಷಾದನೀಯ.

ಆಂಧ್ರದ ಗುಂಟೂರು ತಾಲ್ಲೂಕಿನ ತಾಡೇಪಲ್ಲಿ ಗ್ರಾಮದ ಕಾಂ. ಅಮರ ರೆಡ್ಡಿ (ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಾಲ್ಲೂಕು ಸಮಿತಿ ಸದಸ್ಯ) ಕೊಲೆಗೀಡಾದವರಲ್ಲೊಬ್ಬರು. ಸಿ.ಪಿ.

(7ನೇ ಪುಟ ನೋಡಿ)

ನ್ಯೂಟ್ರಾನ್ ಬಾಂಬ್-ಮಾನವ ಅಸ್ತಿತ್ವಕ್ಕೆ ಒಂದು ಸವಾಲು

[ನಾವು ಇಪ್ಪತ್ತನೆಯ ಶತಮಾನವನ್ನು ಯುದ್ಧಗಳ ಮತ್ತು ಮಾರಕಾಯುಧಗಳ ಯುಗವೆಂದು ಕರೆಯಬೇಕಾಗುತ್ತದೆ. ಇಷ್ಟು ದಿನಗಳವರೆಗೆ ಅಟೋಮಿಕ್ ಬಾಂಬ್, ಹೈಡ್ರೋಜನ್ ಬಾಂಬ್, ಖಂಡಾಂತರ ಬಾಂಬರಗಳೊಂದಿಗೆ ಚಲ್ಲಾಟವಾಡಿದ ಅಮೇರಿಕ ಈಗ ನ್ಯೂಟ್ರಾನ್ ಬಾಂಬನ್ನು ಜಗತ್ತಿಗೆ ತೋರಿಸಿ ಅಟ್ಟಹಾಸದಿಂದ ನಗುತ್ತಾ ಮಾನವ ಜೀವನದೊಡನೆ ಚಲ್ಲಾಟವಾಡುತ್ತಿದೆ.

ನಾಲ್ಕನೇ ದರ್ಜೆಯ ಚಲನಚಿತ್ರದಲ್ಲಿ ಮೂರನೇ ದರ್ಜೆಯ ನಟನಾದ ಮತ್ತು ಅಮೇರಿಕಾದ ಹಾಲಿ ಅಧ್ಯಕ್ಷರಾದ ರೋನಾಲ್ಡ ರೇಗನ್‌ರು ನ್ಯೂಟ್ರಾನ್ ಬಾಂಬನ್ನು ಉತ್ಪಾದಿಸುವ ತಮ್ಮ ನಿರ್ಣಯ ಪ್ರಕಟಿಸಿದ್ದಾರೆ.

ಎರಡನೇ ವಿಶ್ವಯುದ್ಧದ ಕೊನೆಯ ಅವಧಿಯಲ್ಲಿ ಜಪಾನಿನ ನಾಗಾಸಾಕಿ, ಹಿರೋಷಿಮಾಗಳ ಮೇಲೆ ಅಣು ಬಾಂಬ್ ಹಾಕಿದ್ದ ದಿನಾಂಕದಂದೇ ರೇಗನ್‌ರು ತಮ್ಮ ನಿರ್ಣಯ ಪ್ರಕಟಿಸಿದ್ದಾರೆ.

ಸಂಘರ್ಷದ ಈ ಪ್ರಸಕ್ತ ಲೇಖನದಲ್ಲಿ ಮಾರಕಾಸ್ತ್ರಗಳನ್ನು ಸಜ್ಜುಗೊಳಿಸುವಲ್ಲಿ ಅಮೇರಿಕಕ್ಕೆ ಇರುವ ಆಸಕ್ತಿಯ ಕುರಿತು ವಿವರಿಸಲಾಗಿದೆ. ಮುಂದಿನ ವಾರಗಳಲ್ಲಿ ನ್ಯೂಟ್ರಾನ್ ಬಾಂಬನ್ನು ವಿರೋಧಿಸಿ ಯುರೋಪಿನಾದ್ಯಂತ ಭಾರೀ ಪ್ರತಿಭಟನಾ ಅಲೆ ಎದ್ದಿದ್ದರ ವಿವರ, ಪೋಲೆಂಡ್ ಪ್ರತಿಕ್ರಾಂತಿಕಾರಿಗಳ ವಿಷಯದಲ್ಲಿ ಅಪಾರ ಸಹಾನುಭೂತಿ ಹರಿಸುತ್ತಿರುವ ರೇಗನ್‌ರ ದೇಶವು ಕಳೆದ ಮೂರು ದಶಕಗಳಲ್ಲಿ ಪರದೇಶಗಳ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡಿರುವ ವಿವರದ ಕುರಿತು ಲೇಖನ ಪ್ರಕಟಿಸಲಿದ್ದೇವೆ.]

ನ್ಯೂಟ್ರಾನ್ ಬಾಂಬ್ ಎಂದರೇನು ?

ನ್ಯೂಟ್ರಾನ್ ಬಾಂಬಿಗೆ ಮಾನವನ ಅಸ್ತಿತ್ವವನ್ನೇ ಅಳಿಸಿಹಾಕುವ ಒಂದು ವಿಶಿಷ್ಟ ಗುಣವಿದೆ. ಇದಕ್ಕೆ ಅಮೇರಿಕದ ಮಿಲಿಟರಿ ಭಾಷೆಯಲ್ಲಿ "ತೀಕ್ಷ್ಣ ಶಾಖದ ಕಿರಣಗಳನ್ನು ಬಿಡುವ ಯುದ್ಧ ಸಾಮಗ್ರಿ" ಎಂದು ಕರೆಯಲಾಗುತ್ತಿದೆ. ಈ ನ್ಯೂಟ್ರಾನ್ ಬಾಂಬ್ ಅಥವಾ ರೀಗನ್ ಬಾಂಬ್ ಎಂದು ಕರೆಯಲ್ಪಡುವ ಈ ಯುದ್ಧ ಸಾಮಗ್ರಿ ಸಂಪತ್ತನ್ನು ಕಟ್ಟಡಗಳನ್ನು ಹೇಗಿರುವವೋ ಹಾಗೆಯೇ ಉಳಿಸಿ ಜನರನ್ನು ಮಾತ್ರ ಕೊಲ್ಲುತ್ತದೆ.

ಯಾವುದೇ ತರಹದ ಸಾಮಾನ್ಯ ಬಾಂಬಿಗೆ ಅಥವಾ ನ್ಯೂಕ್ಲಿಯರ್ ಬಾಂಬಿಗೆ ನಾಶಶಕ್ತಿ ಒದಗುವುದು ಮೂರು ಪರಿಣಾಮಗಳಿಂದ: ಶಾಖ, ಸಿಡಿತದ ಶಬ್ದ ಮತ್ತು ಶಾಖದ ಕಿರಣಗಳಿಂದ; ನ್ಯೂಕ್ಲಿಯರ್ ಬಾಂಬನ್ನು ಸಿಡಿಸಿದಾಗ ಉತ್ಪತ್ತಿಯಾದ ಶಾಖ ಮತ್ತು ಬೆಂಕಿ ಸಾವಿರಾರು ಜನರನ್ನು ಸುಡುತ್ತದೆ. ಮತ್ತು ಅದರ ಶಬ್ದ ಸಾಕಷ್ಟು ಕಟ್ಟಡಗಳನ್ನು ನಾಶಪಡಿಸುತ್ತದೆ. ಕಣ್ಣಿಗೆ ಕಾಣದ ನ್ಯೂಕ್ಲಿಯರ್ ಕಿರಣಗಳು ಜನರನ್ನು ಒಮ್ಮೆಲೇ ಕೊಲ್ಲುವುದರ ಜೊತೆಗೆ ಮಾನವನ ಜೈವಿಕ ಕ್ರಿಯೆಯ ಮೇಲೆ ದೀರ್ಘಾವಧಿ ಪರಿಣಾಮವನ್ನುಂಟುಮಾಡುತ್ತದೆ. ಇದು ಶಾಖ ಮತ್ತು ಸಿಡಿತದ ಶಬ್ದವನ್ನು ಕಡಿಮೆಗೊಳಿಸಿ ಹೆಚ್ಚು ಶಾಖದ ತೀಕ್ಷ್ಣವಾದ ಕಿರಣಗಳನ್ನು ಉತ್ಪಾದಿಸುತ್ತದೆ. ಈ ಕಿರಣಗಳೇ ಮಾನವನ ಅಸ್ತಿತ್ವಕ್ಕೆ ಧಕ್ಕೆಯನ್ನುಂಟುಮಾಡುವ ಸವಾಲುಗಳಾಗಿ ನಿಲ್ಲುತ್ತವೆ.

ನ್ಯೂಟ್ರಾನ್ ಬಾಂಬುಗಳನ್ನು 8 ಇಂಚಿನ ಸಣ್ಣ ಹೌವಿಟ್ಜರ ಗನ್‌ಗಳಿಂದ ಅಥವಾ ಚಿಕ್ಕ ರೇಂಜ್ ರಾಕೆಟ್‌ಗಳಿಂದ ಹಾರಿಸಬಹುದು. ನ್ಯೂಟ್ರಾನ್ ಬಾಂಬನ್ನು ಅಳವಡಿಸಿದಂತ ಇಂತಹ ಸಾವಿರಾರು ಗನ್ನುಗಳು ಮತ್ತು ರಾಕೆಟ್‌ಗಳು ಈಗಾಗಲೇ ಪಶ್ಚಿಮ ಯುರೋಪದಲ್ಲಿ ಸ್ಥಾಪಿಸಲ್ಪಟ್ಟಿವೆ.

ಅವಸರದ ನಿರ್ಧಾರವೇನಲ್ಲ

ಅಮೇರಿಕವು ನ್ಯೂಟ್ರಾನ್ ಬಾಂಬ್ ಉತ್ಪಾದನೆ ಮಾಡುವುದನ್ನು ನಿರ್ಣಯಿಸಿದ್ದು ಅವಸರದ ನಿರ್ಧಾರವೇನಲ್ಲ. ಇದನ್ನು ನಾವು ಬಿಡಿಬಿಡಿಯಾಗಿ ನೋಡುವುದಕ್ಕಿಂತ ಇಡಿಇಡಿಯಾಗಿ ಅದರ ಧೋರಣೆಯನ್ನು ನೋಡಿದಾಗ ಮಾತ್ರ ಅದು ನಮಗೆ ತಿಳಿದು ಬರುತ್ತದೆ. ಲ್ಯಾಟಿನ್ ಅಮೇರಿಕಾದ ದೇಶಗಳಾದ ಎಲ್‌ಸಾಲ್ವಡೋರ್ ಮುತ್ತಿತರ ಮತ್ತು ಮೂರನೇ ಜಗತ್ತಿನ ದೇಶಗಳಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆಸುವ ಹೋರಾಟಗಳನ್ನು ಹತ್ತಿಕ್ಕುವುದು, ಜನಾಂಗವಾದವನ್ನು ಮುಂದೆಮಾಡಿ ಕರಿಯರ ವಿರುದ್ಧ ಬಿಳಿಯರನ್ನು ಮತ್ತು ಅರಬರ ವಿರುದ್ಧ ಝಿಯೋನಿಸ್ಟರನ್ನು ಬೆಂಬಲಿಸುವುದು, ಸಮಾಜವಾದಿ ರಾಷ್ಟ್ರಗಳೊಂದಿಗೆ ವೈರುಧ್ಯದ ಧೋರಣೆಯನ್ನು ಅನುಸರಿಸುವುದು ಜಗತ್ತಿಗೆಲ್ಲ ಚಿರಪರಿಚಿತವಾದ ವಿಷಯ.

ಮಿಲಿಟರಿ ವೆಚ್ಚ

ವಿಯೆಟ್ನಾಂ ಯುದ್ಧದಲ್ಲಿ ಎಂದೆಂದೂ ತುಂಬಿಕೊಳ್ಳಲಾರದಂತ ಸೋಲನ್ನು ಸರಿಪಡಿಸಿಕೊಳ್ಳಲು ಮತ್ತು ಪ್ರತಿಸ್ಪರ್ಧಿಯರನ್ನು ನಿರ್ನಾಮ ಮಾಡಲು ಅಮೇರಿಕ ತನ್ನ ಮಿಲಿಟರಿ ಶಕ್ತಿಯನ್ನು ಇನ್ನೂ ಹೆಚ್ಚಿಸಿಕೊಳ್ಳುತ್ತಾ ಇದೆ. 1981-86ರ ಅವಧಿಯಲ್ಲಿ 1700 ಬಿಲಿಯನ ಡಾಲರುಗಳನ್ನು (ರೂ. 14,45,500 ಕೋಟಿಗಳು) ಮಿಲಿಟರಿ ವೆಚ್ಚಕ್ಕಾಗಿ ಬಳಸಲು ಸಲಹೆಯನ್ನು ನೀಡಿದೆ. ಈ ಮೊತ್ತದ ಒಂದು ರೂಪಾಯಿ ನೋಟುಗಳನ್ನು ಸರಮಾಲೆಯಂತೆ ಪೋಣಿಸಿದರೆ ಇದರ ಉದ್ದ ಭೂಮಿ ಮತ್ತು ಸೂರ್ಯ ಇವುಗಳ ಅಂತರಕ್ಕಿಂತ ಹೆಚ್ಚಾಗಬಹುದು.

ಈ ಮಿಲಿಟರಿ ವೆಚ್ಚವನ್ನು ತೂಗಿಸುವುದಕ್ಕಾಗಿ ಅಮೇರಿಕ ದೇಶವು ಕುರುಡರಿಗೆ, ಕುಂಟರಿಗೆ, ಮುದುಕರಿಗೆ, ಅನಾಥರಿಗೆ ಮತ್ತು ಮಕ್ಕಳಿಗಾಗಿ ಖರ್ಚುಮಾಡುವ ಹಣದಲ್ಲಿ ಕಡಿತವನ್ನು ಮಾಡಿದೆ.

ಈ ಮೇಲಿನ ಹಿನ್ನೆಲೆಗಳಲ್ಲಿ ಅಮೇರಿಕವು ನ್ಯೂಟ್ರಾನ್ ಬಾಂಬನ್ನು ಉತ್ಪಾದನೆ ಮಾಡುವುದನ್ನು ನಾವು ನೋಡಬೇಕಾಗುತ್ತದೆ.

ಈಗಾಗಲೇ ಮೂರು ವರ್ಷಗಳಿಂದ ನ್ಯೂಟ್ರಾನ್ ಬಾಂಬ್‌ಗಳನ್ನು ಉತ್ಪಾದನೆ ಮಾಡುತ್ತಿದ್ದಾರೆ ಮತ್ತು ಅವುಗಳನ್ನು ಯುರೋಪದಲ್ಲಿ ಶೇಖರಿಸಲಾಗಿದೆ ಎಂದು ಪಶ್ಚಿಮ ಯುರೋಪಿನ ಮೂಲಗಳಿಂದ ತಿಳಿದುಬಂದಿದೆ. 1970ರಲ್ಲಿ ಕ್ಯಾಲಿಫೋರ್ನಿಯಾದ 'ಲಾರೆನ್ಸ್ ಲಿವ್ಹರ್ ಮೋರ್ ಲ್ಯಾಬೋರೇಟರಿ'ಯಲ್ಲಿ ಈ ನ್ಯೂಟ್ರಾನ್ ಬಾಂಬ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ. 1978ರಲ್ಲಿ ಕಾರ್ಟರ್ ಆಡಳಿತದಲ್ಲಿ ಈ ಬಾಂಬುಗಳು ಉತ್ಪಾದನೆಗೆ ಸಿದ್ಧವಾಗಿದ್ದವು. ಆದರೆ ಆಗ ಪಶ್ಚಿಮ ಯುರೋಪದಲ್ಲಿ ಪ್ರತಿಭಟನೆ ನಡೆದದ್ದರಿಂದ 1978ರ ಏಪ್ರಿಲ್‌ನಲ್ಲಿ ಕಾರ್ಟರ್‌ರವರು "ಬಾಂಬುಗಳನ್ನು ಉತ್ಪಾದಿಸುವುದಿಲ್ಲ; ಆದರೆ ಅವುಗಳ ಬಿಡಿ ಭಾಗಗಳನ್ನು ಮಾತ್ರ ಸಿದ್ಧಮಾಡುವುದಾಗಿ ಹೇಳಿಕೆಯಿತ್ತರು. (ಕಾರ್ಟರರು ನ್ಯೂಟ್ರಾನ್ ಬಾಂಬುಗಳನ್ನು ಉತ್ಪಾದನೆ ಮಾಡುವ ನಿರ್ಧಾರವನ್ನು ಕೈಬಿಟ್ಟಿರುವುದಾಗಿ ಪಶ್ಚಿಮ ಯುರೋಪದ ಪತ್ರಿಕೆಗಳು ಸುಳ್ಳು ವರದಿಯನ್ನು ಪ್ರಕಟಿಸಿದ್ದವು.) ಆದರೆ ವಾಸ್ತವವಾಗಿ 1978ರ ಅಕ್ಟೋಬರ್ ತಿಂಗಳಿನಲ್ಲಿ ನ್ಯೂಟ್ರಾನ್ ಬಾಂಬ್‌ಗಳನ್ನು ಉತ್ಪಾದಿಸಲು ಅಮೇರಿಕವು ಪ್ರಾರಂಭಿಸಿತ್ತು. 1980ರ ಜುಲೈನಲ್ಲಿ ಕಾರ್ಟರರು ಸೀಮಿತ ಭೌಗೋಳಿಕ ಪ್ರದೇಶದ ಮೇಲೆ ನಿಯಮಿತ ನ್ಯೂಕ್ಲಿಯರ್ (ಅಣು) ಯುದ್ಧವನ್ನು ಮಾಡಬಹುದು ಎಂದು ತಮ್ಮ 'ಅಧ್ಯಕ್ಷೀಯ ನಿರ್ದೇಶನ–59' ಎಂಬ ದಾಖಲೆಯಲ್ಲಿ ಸೂಚಿಸಿದ್ದರು.

ಎನ್ನ ಸರಿಸಮಾನರಾರಿಹರು!

ತನ್ನನ್ನು ನ್ಯೂಕ್ಲಿಯರ್ ಯುದ್ಧಗಳಲ್ಲಿ ಯಾರೂ ಸೋಲಿಸಲಾರರೆಂಬ ಅಹಂಭಾವವು 1940ರ ಮತ್ತು 50ರ ದಶಕಗಳಲ್ಲಿ ಅಮೇರಿಕಕ್ಕೆ ಇತ್ತು. ಅಣು ಯುದ್ಧ ಸಾಮಗ್ರಿಗಳಿಂದ ಬೇಕಿದ್ದವರನ್ನು ಗೆದ್ದು ಸಾಕಾದವರನ್ನು ಮುಗಿಸಬಹುದೆಂಬ ಹಮ್ಮಿನಿಂದ ತುಂಬಿತ್ತು. ಜಗತ್ತಿನ ಶಾಂತಿಯನ್ನು ಕದಡಿತ್ತು.

ಅಮೇರಿಕದ ಕ್ರಮವನ್ನು ವಿರೋಧಿಸಲು ಮತ್ತು ಶಕ್ತಿ ಸಮತೋಲನವನ್ನು ಸರಿಯಾಗಿಸಲು, ಶಾಂತಿಯನ್ನು ರಕ್ಷಿಸಲೋಸುಗ ರಷ್ಯವೂ ಯುದ್ಧ ಸಾಮಗ್ರಿಗಳಿಂದ ಸಜ್ಜಿತವಾಗಬೇಕಾಗಿದ್ದು ಅವಶ್ಯಕವಾಗಿತ್ತು. ಇಲ್ಲವಾದಲ್ಲಿ ಶಕ್ತಿ ಅಸಮತೋಲನದಿಂದ ಸಮಾಜವಾದಿ ರಾಷ್ಟ್ರಗಳನ್ನು ತುಳಿದಿಕ್ಕಲು ಅಮೇರಿಕಕ್ಕೆ ಸುಲಭಸಾಧ್ಯವಾಗುತ್ತಿತ್ತು. ರಷ್ಯವೂ ಯುದ್ಧ ಸಾಮಗ್ರಿಗಳಿಗೋಸ್ಕರ ಹೆಚ್ಚು ಹಣ ಖರ್ಚು ಮಾಡುವುದು ಅನಿವಾರ್ಯವಾಯಿತು..

1960ರ ದಶಕದಲ್ಲಿ ರಷ್ಯಾ ತನ್ನ ನ್ಯೂಕ್ಲಿಯರ್ ಶಕ್ತಿಯನ್ನು ಅಮೇರಿಕಕ್ಕಿಂತ ಬಲಪಡಿಸಿಕೊಂಡಾಗ ಅಮೇರಿಕ ತನ್ನ ಮೊದಲಿನ ನೀತಿಯನ್ನು ಬದಲಾಯಿಸಿ ಹೊಸ ನೀತಿಯನ್ನು ಅಳವಡಿಸಿಕೊಂಡಿತು: ಆ ಹೊಸ ನೀತಿಯೇ 'Mutal Assured Destruction', ಸಂಕ್ಷಿಪ್ತವಾಗಿ 'MAD' ಎಂದು ಹೇಳಬಹುದು. ಕಾರ್ಯಕ್ಕೆ, ನೀತಿಗೆ ತಕ್ಕ ಹೆಸರು.

ಸೀಮಿತ ಭೌಗೋಳಿಕ ಪ್ರದೇಶದ ನಿಯಮಿತ ನ್ಯೂಟ್ರಾನ್ ಬಾಂಬುಗಳ ರುದ್ರಭೂಮಿ ಭವಿಷ್ಯದಲ್ಲಿ ಪಶ್ಚಿಮ ಯುರೋಪ ಆಗಬಹುದು.

ಅಮೇರಿಕಮೊದಲನೆಯದು

ಇಂತಹ ಭಯಂಕರ, ಭಯಾನಕ ನ್ಯೂಕ್ಲಿಯರ್ ಯುದ್ಧ ಸಾಮಗ್ರಿಗಳ ಪಂದ್ಯಾಟದಲ್ಲಿ ಅಮೇರಿಕ ಮೊಟ್ಟಮೊದಲ ತಯಾರಕ ಎಂದು ಹೇಳುವ ಅವಶ್ಯಕತೆಯೇ ಇಲ್ಲ. ಅವರ ನ್ಯೂಕ್ಲಿಯರ್ ಸಾಧನೆಗಳೇ ಇದನ್ನು ರುಜುವಾತುಪಡಿಸುತ್ತವೆ.

ಈ ಕೆಳಗಿನ ಯುದ್ಧ ಸಾಮಗ್ರಿಗಳನ್ನು ಮೊದಲನೆಯದಾಗಿ ತಯಾರಿಸಿದ ಶ್ರೇಯಸ್ಸು (?) ಅಮೇರಿಕದ್ದೇ.

ಮೊದಲನೇ ಆಟೋಮಿಕ್ ಬಾಂಬ್ 1945, ಮೊದಲನೇ ಖಂಡಾಂತರ ಬಾಂಬರಗಳು-1948, ಮೊದಲನೇ ಹೈಡ್ರೋಜನ್ ಬಾಂಬ್–1954, ನ್ಯೂಕ್ಲಿಯರ್ ಸಬ್‌ಮರೀನ್‌ಗಳು–1954, ಖಂಡಾಂತರ ಬ್ಯಾಲಿಸ್ಟಿಕ್ ಮಿಸೆಲ್ಸ್-1955, ಮೊದಲನೇ ಬ್ಯಾಲಿಸ್ಟಿಕ್ ಮಿಸೆಲ್ಸನ್ನು ಸಬ್‌ಮರೀನ್‌ನಿಂದ ಹಾರಿಸಿದ್ದು-1960, ಎಂ. ಐ. ಆರ್. ವಿ. - 1970, ಎಂ. ಎಕ್ಸ್. ಮಿಸೆಲ ವ್ಯವಸ್ಥೆ–1978

ಈಗ 1980ರ ದಶಕದಲ್ಲಿ ನ್ಯೂಟ್ರಾನ್ ಬಾಂಬ್.

ಇವುಗಳನ್ನು ಮೊದಲನೆಯದಾಗಿ ಉಪಯೋಗಿಸಿದ ದೇಶವೆಂದರೆ ಅಮೇರಿಕವೇ. ಹಿರೋಷಿಮಾ-ನಾಗಾಸಾಕಿ ಹತ್ಯಾಕಾಂಡದ ನೆನಪನ್ನು ಜನಮನದಿಂದ ಅಳಿಸಲಾಗಿಲ್ಲ. ಮೂವತ್ತಾರು ವರ್ಷಗಳ ನಂತರವೂ ಅಲ್ಲಿಯ ಜನರು ಬಾಂಬ್ ಪ್ರಯೋಗದ ಪರಿಣಾಮವನ್ನು ಅನುಭವಿಸುತ್ತಿದ್ದಾರೆ.

ಮಾನವ ಹಕ್ಕುಗಳು, ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಮುಂತಾದ ಶಬ್ದಗಳನ್ನು ಬಡಬಡಿಸಿ ಇನ್ನೊಂದು ಪ್ರದೇಶದ ಜನರನ್ನು ಗುಲಾಮಗಿರಿಯಲ್ಲಿಡಲು ಪ್ರಯತ್ನಿಸುವ, ಜಗತ್ತನ್ನು ನ್ಯೂಕ್ಲಿಯರ್ ಯುದ್ಧದ ಪಂದ್ಯಾಟದಲ್ಲಿ ನೂಕಿ ಇಡೀ ಮಾನವ ಅಸ್ತಿತ್ವವನ್ನೇ ಅಳಿಸಲು ಪ್ರಯತ್ನಪಡುವ ಅಮೇರಿಕನ್ ಸಾಮ್ರಾಜ್ಯವಾದಿಗಳ ವಿರುದ್ಧ ಧ್ವನಿಯೆತ್ತಬೇಕಾಗಿದೆ.

ಶಾಂತಿಯನ್ನು ಬಯಸುವ ಪ್ರತಿಯೊಬ್ಬ ಮನುಷ್ಯನು, ಮಾನವನ ಉಳಿವನ್ನು ಬಯಸುವ ಪ್ರತಿಯೊಬ್ಬನು ರೇಗನ್ ಮತ್ತು ಅವರ ಪೆಂಟಾಗನ್ ಜನರಲ್‌ಗಳ ಕನಸನ್ನು ನುಚ್ಚುನೂರು ಮಾಡಬೇಕಾದ ಕಾಲ ಸನ್ನಿಹಿತವಾಗಿದೆ.

—ಸಂಘರ್ಷ

ಖಂಡನೆ

ಶೃಂಗೇರಿ ವಿದ್ಯಾರ್ಥಿಗಳು ನ್ಯಾಯಯುತವಾದಂತಹ ಬೇಡಿಕೆಗಳನ್ನು ಮುಂದಿಟ್ಟು ನಡೆಸುತ್ತಿರುವ ಹೋರಾಟವನ್ನು ಹತ್ತಿಕ್ಕಲು ಪೋಲೀಸರು ನಡೆಸಿದ ಲಾಠೀ ಪ್ರಹಾರದ ಕ್ರಮವನ್ನು ಎಸ್.ಎಫ್.ಐ. ಕುಂದಾಪುರ ಟೌನ್ ಸಮಿತಿಯು ತೀವ್ರವಾಗಿ ಖಂಡಿಸಿದೆ.

ಈ ಕುರಿತು ಟೌನ್ ಸಮಿತಿಯ ಕೆ. ವಿಶ್ವನಾಥ ಅವರು ಹೇಳಿಕೆಯೊಂದನ್ನು ಹೊರಡಿಸಿ ಶೃಂಗೇರಿಯ ವಿದ್ಯಾರ್ಥಿಗಳ ಬೇಡಿಕೆಗಳು ಇತ್ಯರ್ಥಗೊಳ್ಳುವಂತೆ ಸಂಬಂಧಪಟ್ಟವರು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ರೀಗನ್‌ರ ನಿದ್ರಾಭಂಗ-ಒಂದು ವಿಪರ್ಯಾಸ

ಪೋಲೆಂಡಿನ ಬೆಳವಣಿಗೆಗಳು ಅಧ್ಯಕ್ಷ ರೀಗನ್ ಬಯಸಿದ್ದಂತೆ ಆಗಲಿಲ್ಲ. ದೇಶದಲ್ಲಿ ಅನಾಹುತ ಸಂಭವಿಸುವುದನ್ನು ತಪ್ಪಿಸಲು ಸಂವಿಧಾನ ರೀತ್ಯ ಪೋಲೆಂಡಿನ ಸರಕಾರವು ಲಷ್ಕರೀ ಶಾಸನವನ್ನು ಜಾರಿಗೆ ತಂದುದ್ದರಿಂದ ರೀಗನ್ ರೊಚ್ಚಿಗೆದ್ದಿದ್ದಾರೆ. ಅಮೆರಿಕಾದ ಅಧಿಪತಿಗೆ ಅದು ಸಹಿಸಲಾರದ ಸಂಕಟವಾಗಿ ಪರಿಣಮಿಸಿತು. ಸಾಲಿಡಾರಿಟಿಯ ಉಗ್ರವಾದಿಗಳು ತಮ್ಮ ಟ್ರೇಡ್‌ಯೂನಿಯನ್ ಮುಖವಾಡಗಳನ್ನು ಬದಿಗಿರಿಸಿ ಪೋಲಿಷ್ ಸರಕಾರವನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಿ ಅಧಿಕಾರವನ್ನು ವಶಪಡಿಸಿಕೊಂಡಿದ್ದರೆ ಅವರಿಗೆ ಸಂತೋಷವಾಗುತ್ತಿತ್ತು. ಆದರೆ ಅದು ಹಾಗಾಗದೇ ಹೋಯಿತು.

ಆದ್ದರಿಂದ ರೀಗನ್ ಏಕಾಏಕಿಯಾಗಿ ತಕ್ಷಣ ಮಾನವ ಹಕ್ಕುಗಳ ಪ್ರತಿಪಾದಕರಾಗಿಬಿಟ್ಟರು. ಪೋಲೀಸ್ ಜನತೆಯ ಸ್ವಾತಂತ್ರ್ಯ ಹರಣ, ಭಿನ್ನಮತೀಯರ ಮರ್ದನ ಇತ್ಯಾದಿಗಳನ್ನು ಕುರಿತು ಅವರು ಕಣ್ಣೀರು ಹರಿಸಿದರು. ಅಮೆರಿಕಾದ ವಿಮಾನ ಸಂಚಾರ ನಿಯಂತ್ರಣಗಾರರ ಸಂಪನ್ನು ಮುರಿಯಲು ತಮ್ಮ ಆಡಳಿತೆಯು ತೆಗೆದುಕೊಂಡ ಉಗ್ರಕ್ರಮಗಳನ್ನು ಅವರು ಮರೆತರು. ಅವರ ದೃಷ್ಟಿಯಲ್ಲಿ ಅದು ಸಮರ್ಥನೀಯ. ಪೋಲೆಂಡಿನ ಸರಕಾರ ಹಾಗೆ ಮಾಡಿದರೆ ತಪ್ಪು.

ರೀಗನ್ ಮತ್ತು ಅವರ ಮಿತ್ರರು ಪೋಲೆಂಡಿನಲ್ಲಿ ಲಷ್ಕರೀ ಶಾಸನದ ವಿರುದ್ಧವಾಗಿ ಜನರಿಂದ ದೊಡ್ಡ ದಂಗೆಯನ್ನೇ ನಿರೀಕ್ಷಿಸಿದ್ದರು. ಅಂತರ್ಯುದ್ಧದ ಕನಸು ಕಂಡಿದ್ದರು. ದುರದೃಷ್ಟವಶಾತ್ ಅವರು ಎಣಿಸಿದ್ದುದೇನೂ ಸಂಭವಿಸಲಿಲ್ಲ. ಅದಕ್ಕೆ ಪ್ರತಿಯಾಗಿ ಕ್ರಮೇಣ ಅಲ್ಲಿ ಪರಿಸ್ಥಿತಿಯು ಹತೋಟಿಗೆ ಬರುತಿತು. ಅವರ ಪ್ರಕಾರ ಅದು ಹಾಗಾಗಕೂಡದು.

ಹೀಗಾಗಿ ಕಾರ್ಮಿಕರ ಹಕ್ಕುಗಳು ಮತ್ತು ಮಾನವಹಕ್ಕುಗಳ ನವ್ಯ ಪ್ರತಿಪಾದಕ ರೀಗನ್‌ರವರು ತಾವು ಈಗ ಕಾರ್ಯೋನ್ಮುಖರಾಗಬೇಕು ಎಂಬ ತೀರ್ಮಾನಕ್ಕೆ ಬಂದರು. ಪೋಲೆಂಡಿನ ಮೇಲೆ ಒತ್ತಾಯವನ್ನು ಹೆಚ್ಚಿಸಬೇಕು. ಆಹಾರ ಸರಬರಾಜುಗಳನ್ನು ನಿಲ್ಲಿಸಿ ತಮಗೆ ಪ್ರಿಯರಾದ ಪೋಲಿಷ್ ಕಾರ್ಮಿಕರನ್ನು ಹಸಿವಿನಿಂದ ಬಳಲಿಸಬೇಕು. ಪೋಲೆಂಡಿನೊಂದಿಗೆ ವ್ಯಾಪಾರ ವಹಿವಾಟು ನಿಲ್ಲಿಸಬೇಕು. ಅಮೆರಿಕ ಮಾಡಿಕೊಂಡಿರುವ ಎಲ್ಲ ಒಪ್ಪಂದಗಳೂ ರದ್ದಾಗಬೇಕು. ಸಂಕ್ಷೇಪವಾಗಿ ಹೇಳಬೇಕೆಂದರೆ ಪೋಲೆಂಡಿನ ಮೇಲೆ ಆರ್ಥಿಕ ದಿಗ್ಬಂಧನ ಹೇರಬೇಕು. ಈ ಕ್ರಮಗಳನ್ನು ಹೇರಲು ರೀಗನ್ ನಿರ್ಧರಿಸಿದ್ದು ಪೋಲೆಂಡಿನಲ್ಲಿ ಲಷ್ಕರೀ ಶಾಸನ ಬಂದ ಹದಿನೈದು ದಿವಗಳ ಮೇಲೆ, ಅದೂ ಅಲ್ಲಿನ ಸ್ಥಿತಿಯು ಪೂರ್ಣವಾಗಿ ಹತೋಟಿಗೆ ಬಂದಿರುವಾಗ.

ಈ ಬಗೆಯ ಶೀತ ಯುದ್ಧದ ಕ್ರಮಗಳನ್ನು ರೀಗನ್ ತೆಗೆದುಕೊಂಡುದೇಕೆ? ಪೋಲೆಂಡಿನ ಕಾರ್ಮಿಕರ ಮೇಲೆ ಅಥವಾ ಮಾನವ ಹಕ್ಕುಗಳ ಮೇಲೆ ಅವರಿಗಿರುವ ವಿಶ್ವಾಸದಿಂದೇನಲ್ಲ. ಆದರೆ ಪೋಲೆಂಡಿನ ಮೇಲೆ ಒರಟು ರೀತಿಯಲ್ಲಿ ಒತ್ತಾಯ ತರುವುದಕ್ಕಾಗಿ ಮತ್ತು ಸಮಾಜವಾದೀ ವ್ಯವಸ್ಥೆಯನ್ನ ಕಿತ್ತೊಗೆಯಲು ದಂಗೆ ಏಳದೆ ವಿಫಲರಾದ ಪೋಲೀಷ್ ಜನರಿಗೆ ತಕ್ಕ ಶಾಸ್ತಿಮಾಡುವುದಕ್ಕಾಗಿ. ಅಷ್ಟೇ ಅಲ್ಲ, ಸೋವಿಯೆತ್ ಒಕ್ಕೂಟದ ವಿರುದ್ಧವಾಗಿಯೂ ಇದೇ ಬಗೆಯ ಕ್ರಮಗಳನ್ನು ಕೈಗೊಳ್ಳುವ ಭೀತಿಯನ್ನು ಅವರು ಹಾಕಿದ್ದಾರೆ. ಇದರಲ್ಲಿ ಅವರ ಉದ್ದೇಶ ಸುಸ್ಪಷ್ಟ. ಅದು ಪ್ರಪಂಚದಲ್ಲಿ ಉದ್ರಿಕ್ತತೆಯನ್ನು ಉಲ್ಬಣಗೊಳಿಸುವುದು ಮತ್ತು ಶಸ್ತ್ರಾಸ್ತ್ರ ಪೈಪೋಟಿಯನ್ನು ಹೆಚ್ಚಿಸುವುದು.

ಪೋಲೆಂಡಿನ ವಿಷಯದಲ್ಲಿ ತೀವ್ರ ಪ್ರಶ್ಚಾತ್ತಾಪ ಪಡುತ್ತಿರುವ ರೀಗನರಿಗೆ ಅವರ ಮಿತ್ರರು ಮಾಡುತ್ತಿರುವ ಅಕೃತ್ಯಗಳೆಲ್ಲ ಅಪ್ರಾಯಮಾನ. ಎಲ್ ಸಾಲ್ವಡೋರ್‌ನ ಮಿಲಿಟರಿ ಜುಂಟಾ ಪ್ರತಿನಿತ್ಯ ನಡೆಸುತ್ತಿರುವ ಸಾಮೂಹಿಕ ಕಗ್ಗೊಲೆಗಳಿಂದ ರೀಗನ್‌ರ ಮನಸ್ಸಾಕ್ಷಿಗೆ ಬಾಧೆಯೇನಾಗದು. ಟರ್ಕಿಷ್ ಮಿಲಿಟರಿ ಸರ್ವಾಧಿಕಾರದ ದಬ್ಬಾಳಿಕೆಯಾಗಲೀ ಚಿಲಿಯ ಪಿನೋಚೆಟ್ ಆಡಳಿತೆಯ ನೆತ್ತರು ದಾಹವಾಗಲೀ ಅಥವಾ ಪಾಕೀಸ್ತಾನದ ಮಿಲಿಟರಿ ಸರ್ವಾಧಿಕಾರಿ ಜಿಯಾನ ಹೀನ ಕೃತ್ಯಗಳಾಗಲೀ ರೀಗನ್‌ರ ನಿದ್ದೆಗೆ ಭಂಗ ಉಂಟುಮಾಡುವುದಿಲ್ಲ. ಇಸ್ರೇಲಿ ಪ್ರಧಾನಿ ಬೆಗಿನನ ಪ್ರಚೋದನಾತ್ಮಕ ಚರ್ಯೆಗಳು ಅವರನ್ನು ಚಿಂತೆಗೀಡುಮಾಡುವುದಿಲ್ಲ. ಅವರುಗಳೆಲ್ಲ ಒಳ್ಳೆಯ ಕೆಲಸವನ್ನೇ ಮಾಡುತ್ತಿದ್ದಾರೆ. ತಮ್ಮ ಜನತೆಯ ನೆತ್ತರನ್ನು ಮಾತ್ರ ಅವರು ಚೆಲ್ಲುತ್ತಿದ್ದಾರೆ. ಪೋಲೆಂಡ್ ಮಾತ್ರ ರೀಗನರಿಗೆ ತೊಂದರೆ ಉಂಟುಮಾಡುತ್ತಿದೆ. ಅಯ್ಯೋ ಪಾಪ. ರೀಗನ್‌ರ ಈ ವಿಪರ್ಯಾಸಕ್ಕೆ ಏನೆನ್ನಬೇಕು?

—ಸೀಯರಾರ್ಕೆ

ಅಂಗರೇಖನ ಹಳ್ಳಿಯಲ್ಲಿ

ರೈತ ಸಂಘದ ಉದ್ಘಾಟನೆ

ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕು ಅಂಗರೇಖನಹಳ್ಳಿಯಲ್ಲಿ 2-1-1982ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯಸಮಿತಿ ಕಾರ್ಯದರ್ಶಿ ಕಾಮ್ರೇಡ್ ಎಂ. ಕೆ. ಭಟ್ ಅವರಿಂದ ರೈತಸಂಘವು ಉದ್ಘಾಟಿಸಲ್ಪಟ್ಟಿತು. ರಾತ್ರೆ 9 ಗಂಟೆಗೆ ಕಿಕ್ಕಿರಿದು ಸೇರಿದ್ದ ಸಭೆಯನ್ನುದ್ದೇಶಿಸಿ ಪ್ರಾಂತ ರೈತಸಂಘದ ಖಜಾಂಚಿ ಕಾಂ. ಜಗನ್ನಾಥ, ಕೋಲಾರ ಜಿಲ್ಲಾ ರೈತ ಮುಖಂಡ ಕಾಂ.ಆರ್. ವೆಂಕಟ್ರಾಮಯ್ಯ ಮತ್ತು ಅಂಗರೇಖನಹಳ್ಳಿಯ ರೈತಮುಖಂಡ ಕಾಂ. ಮುನಿಸ್ವಾಮಯ್ಯನವರುಗಳು ಭಾಷಣಮಾಡಿದರು. ಕಾಂ. ಲಕ್ಷ್ಮಯ್ಯ ಅಧ್ಯಕ್ಷತೆ ವಹಿಸಿದ್ದರು. ಕಾಂ. ಅಕ್ಕಣರೆಡ್ಡಿಯವರು ಸ್ವಾಗತ ಮಾಡಿದರು. ಕಾಂ. ಕೃಷ್ಣಯ್ಯ ವಂದನಾರ್ಪಣೆ ಮಾಡಿದರು.

ಅಂಗರೇಖನಹಳ್ಳಿಯಲ್ಲಿ ಅತ್ಯಂತ ಅಪರಿಮಿತ ಉತ್ಸಾಹದಿಂದ ಜರುಗಿದ ಈ ಕಾರ್ಯಕ್ರಮಕ್ಕೆ ಚಿಕ್ಕಬಳ್ಳಾಪುರದಿಂದ ನೂರೈವತ್ತು ಮಂದಿ ಕಾರ್ಮಿಕರು ಬಂದಿದ್ದರು. ತಮಟೆಬಾರಿಸುತ್ತಾ ಮೆರವಣಿಗೆಯಲ್ಲಿ ಬಂದ ಇವರು ಅಂಗರೇಖನಹಳ್ಳಿಯ ಜನತೆಗೆ ಸ್ಫೂರ್ತಿ ಇತ್ತರು.

ಭಾಷಣ ಕಾರ್ಯಕ್ರಮಗಳು ಮುಗಿದ ಮೇಲೆ ಹುಳ್ಯಾರು ಸಮುದಾಯದವರಿಂದ "ನರಗುಂದ ಬಂಡಾಯ" ಎಂಬ ನಾಟಕವನ್ನು ಪ್ರದರ್ಶಿಸಲಾಯಿತು. ನೆರೆದ ನೂರಾರು ಮಕ್ಕಳು, ಮಹಿಳೆಯರು ಮತ್ತು ರೈತರು ನಾಟಕದಿಂದ ತುಂಬಾಸ್ಫೂರ್ತಿ ಪಡೆದರು.

●

ಐಕ್ಯರಂಗ ಓದಿ

ನಿಮ್ಮ ಸ್ನೇಹಿತರಿಗೂ ಓದಿಸಿ

ರಾಜೀವ ಪಟ್ಟಾಭಿಷೇಕ

(3ನೇ ಪುಟದಿಂದ)

ಆಗ ಕಾಂಗ್ರೆಸ್ಸಿನ ಹಿರಿಯರಲ್ಲಿ ಬ್ಯಾಂಕ್ ರಾಷ್ಟ್ರೀಕರಣ, ರಾಜರ ಪ್ರೀವೀ ಪರ್ಸ್ ಮುಂತಾದ ವಿಷಯಗಳ ಕುರಿತಂತೆ ಭಿನ್ನಾಭಿಪ್ರಾಯ ಉಂಟಾಗಿ ನಿಜಲಿಂಗಪ್ಪ, ಮೊರಾರ್ಜಿ ದೇಸಾಯಿ ಮೊದಲಾದ ಹಳೇ ಹುಲಿಗಳನ್ನು ಕಾಡಿಗಟ್ಟಿ ಇಂದಿರಾಗಾಂಧಿ ಕಾಂಗ್ರೆಸ್ ಪಕ್ಷವನ್ನು ಒಡೆದು ಇಂದಿರಾ ಕಾಂಗ್ರೆಸ್ ಸ್ಥಾಪಿಸಿದ್ದರು. ಈಗ ಹನ್ನೊಂದು ವರ್ಷಗಳ ತರುವಾಯ ಬೆಂಗಳೂರಿನ ಯುವ ಮೇಳದಲ್ಲಿ ಯುವಕರ ನಡೆ-ನುಡಿಗಳಿಂದಾಗಿ ಮೇಳವೇನೋ ಬಹಳ ಅಬ್ಬರದ ವಾತಾವರಣದಲ್ಲಿ ನಡೆಯಿತಾದರೂ ಕಾಂಗ್ರೆಸ್ ಜನರ ಆತ್ಮವಿಶ್ವಾಸ ಉಡುಗಿ ಹೋಗುತ್ತಿರುವುದು ಪ್ರಕಟವಾಗದೆ ಇರಲಿಲ್ಲ. ಅದಕ್ಕೆ ಕಾರಣವೇನೆಂದರೆ ವಿರೋಧಿ ಪಕ್ಷಗಳೆಲ್ಲ ಒಂದಾಗುವ ವಿಚಾರ ಪ್ರಕಟವಾಗುತ್ತಿರುವುದು ಹಿರಿಯ ಕಾಂಗ್ರೆಸ್ಸಿಗರಲ್ಲಿ ಭಯಭೀತಿಯನ್ನುಂಟುಮಾಡುತ್ತಿದೆ. ಅಷ್ಟೇ ಅಲ್ಲದೆ ಯುವಶಕ್ತಿ ತಮ್ಮನ್ನೆಲ್ಲಿ ಮೂಲೆಗುಂಪುಮಾಡಿ ಹನ್ನೊಂದು ವರ್ಷಗಳ ಹಿಂದಿನ ಚರಿತ್ರೆಯ ಪುನರಾವರ್ತನೆ ಮಾಡುತ್ತದೋ ಹೇಗೆಂಬ ಭಯ. ಈ ಸಮ್ಮೇಳನ ನಡೆಯುವಾಗಲೇ ಪ್ರಕಟವಾದ ಉಪಚುನಾವಣೆಗಳ ಪರಿಣಾಮ ಕೂಡ ತಲೆಕೆದರಿಕೊಳ್ಳುವಂತೆ ಮಾಡಿರಬೇಕು. ವಿರೋಧಿ ಪಕ್ಷಗಳ ಐಕ್ಯತೆ-ಮತದಾರರ ಕಾಂಗ್ರೆಸ್ ವಿರೋಧಿ ಮನೋಭಾವಗಳ ಇಕ್ಕಳದಲ್ಲಿ ಸಿಲುಕಿ ಬೀಳುವ ಪರಿಸ್ಥಿತಿ ಕಾಂಗ್ರೆಸ್ ಮುಖಂಡರಿಗೆ ಉಂಟಾಗಿದೆ. ಸರ್ವಾಧಿಕಾರ ಸ್ಥಾಪನೆಗೆ ಈ ಐಕ್ಯತೆ ದಾರಿಮಾಡಿಕೊಡಬಹುದೆಂದು ಹಿರಿಯರು ಹೇಳುತ್ತಿದ್ದರೆ, 1975ರ ಪರಿಸ್ಥಿತಿಯನ್ನೇ ನಾವು ಎದುರಿಸುವಂತಾಗುತ್ತಿದೆಂದು ರಾಜೀವ್‌ಗಾಂಧಿಯವರು ತಮ್ಮ ಗುಟ್ಟನ್ನು ರಟ್ಟುಮಾಡಿದ್ದಾರೆ. ಮುಂದೇನು ಗತಿ ಎಂದು ನೀವೆಲ್ಲ ಚಿಂತಿಸುತ್ತಿರಬೇಕು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಇದಕ್ಕೆ ಸರಿಯಾದ ಕಾರ್ಯಕ್ರಮವನ್ನು, ಸಂಜೀವಿನಿ ಔಷಧವನ್ನು ನಿಮ್ಮ ಮುಂದಿಟ್ಟಿದೆ. ಏಕವ್ಯಕ್ತಿ ಸರ್ವಾಧಿಕಾರ ಶಕ್ತಿಯಾಗಿ ಬೆಳೆಯುತ್ತಿರುವ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಿ ಪ್ರಜಾಪ್ರಭುತ್ವವನ್ನು ಉಳಿಸಿ ಜನರ ಸಮಸ್ಯೆ ಬಗೆಹರಿಸಬೇಕಾದರೆ ಕನಿಷ್ಟ ಕಾರ್ಯಕ್ರಮಗಳ ತಳಹದಿಯಲ್ಲಿ ಎಡ ಪ್ರಜಾಪ್ರಭುತ್ವರಂಗ ಸ್ಥಾಪಿಸಿ, ಹೋರಾಡುವುದೊಂದೇ ದಾರಿ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಈ ನಿಲುವನ್ನು ಒರೆಗೆ ಹಚ್ಚಿದೆ. ಪ ಬಂಗಾಲ, ತ್ರಿಪುರಾಗಳಲ್ಲಿ ಅದನ್ನು ಯಶಸ್ವಿಗೊಳಿಸಿದೆ. ಬಂಡವಾಳಶಾಹಿ ಪ್ರಜಾಪ್ರಭುತ್ವ ಪಾರ್ಟಿಗಳಲ್ಲಿ ಇನ್ನೂ ಇಂದಿರಾ ಪರ, ಅಧಿಕಾರ ಲಾಲಸಿಗಳಿರುವುದರಿಂದ, ಕೇರಳದಲ್ಲಿ ಆ ಪ್ರಯೋಗ ತಾತ್ಪೂರ್ತಿಕ ಹಿಂದೇಟು ಹಾಕಿದರೂ, ಜನತೆ ಮಾತ್ರ ಎಡಪ್ರಜಾಪ್ರಭುತ್ವರಂಗ ಬಿಟ್ಟು ಹೋಗಲು ತಯಾರಿಲ್ಲೆಂಬುದು ಖಚಿತ. ವಿರೋಧಿ ಪಕ್ಷಗಳ ಐಕ್ಯತೆಯು ಮಾತುಕತೆಯ ಜೊತೆಯಲ್ಲೇ, ಎಡಪ್ರಜಾಪ್ರಭುತ್ವ ರಂಗದ ಬೆಳವಣಿಗೆ ಹಿರಿ ಕಾಂಗ್ರೆಸ್ಸಿಗರಲ್ಲಿ ಭೀತಿಯನ್ನೂ ಯುವ ಕಾಂಗ್ರೆಸ್ಸಿಗರಲ್ಲಿ ಗೊಂದಲವನ್ನೂ ಉಂಟುಮಾಡುತ್ತಿದೆ. ಯುವಶಕ್ತಿಯನ್ನು ಸಂಘಟಿಸಿ, ಸರಿಯಾದ ಮಾರ್ಗದರ್ಶನ ಮಾಡುವುದು ಎಡ ಪಾರ್ಟಿಗಳ ಅದರಲ್ಲೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಆದ್ಯ ಕರ್ತವ್ಯ. ಬೆಂಗಳೂರು ಯುವ ಕಾಂಗ್ರೆಸ್ ಸಮ್ಮೇಳನ ಇದನ್ನು ಎತ್ತಿತೋರಿಸಿದೆ.

●

ರೈತ ಸಂಘದ ಸಭೆ

31-12-81ರಂದು ದ.ಕ. ಜಿಲ್ಲಾ ರೈತಸಂಘದ ಸಭೆಯು ಕಾಂ. ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ ಜರುಗಿತು. ಜಿಲ್ಲಾ ಕಾರ್ಯದರ್ಶಿ ಕಾಂ. ಜನಾರ್ಧನ ನಾಯಕರು ಸ್ವಾಗತಿಸುತ್ತಾ, ಸಧ್ಯ ಜಿಲ್ಲೆಯಲ್ಲಿ ಟ್ರಿಬ್ಯೂನಲ್ ಕೆಲಸ ಕೊನೆಯ ಹಂತದಲ್ಲಿರುವುದನ್ನೂ, ಈ ಈ ಗಡಿಬಿಡಿಯಲ್ಲಿ ಟ್ರಿಬ್ಯೂನಲ್‌ನವರಿಂದ ರೈತರಿಗೆ ವಿಶೇಷ ಕಷ್ಟನಷ್ಟಗಳಾಗುತ್ತಿರುವುದನ್ನೂ, ಕಾನೂನು ಜಾರಿಗೊಳ್ಳುತ್ತಿರುವ ಈ ಸಮಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿರುವುದರ ಕುರಿತು ವಿವರಿಸಿದರು.

ಜಿಲ್ಲಾ ಸಮಿತಿಯ ಸದಸ್ಯರಾದ ಮೋನಪ್ಪಗೌಡ, ರಾಮಕುಂದರ್, ಕೆ.ಆರ್. ಶ್ರೀಯಾನ್, ಕೆ.ವಿ. ರಾವ್, ಹೊನ್ನಯ್ಯ ಮೊದಲಾದವರು ಜಿಲ್ಲೆಯ ಟ್ರಿಬ್ಯೂನಲ್‌ಗಳು ರೈತರಿಂದ ಹಳೆಯ ಗೇಣಿಯ ವಸೂಲಿಗೆ ಇಳಿದಿರುವುದನ್ನು ಖಂಡಿಸಿದರು.

ರೈತರಿಂದ ಅನ್ಯಾಯವಾಗಿ ವಸೂಲಿಮಾಡುತ್ತಿರುವ ಬಾಕಿ ಗೇಣಿಯನ್ನು ತಡೆಹಿಡಿಯುವಂತೆ, ಟ್ರಿಬ್ಯೂನಲ್‌ಗಳ ಭ್ರಷ್ಟಾಚಾರಗಳ ಕುರಿತು ತನಿಖೆ ನಡೆಸಿ, ಸಧ್ಯದ ಲೆವಿ ಧೋರಣೆಯನ್ನು ಕೈಬಿಡುವಂತೆ ಒತ್ತಾಯಿಸಿ ಸರಕಾರಕ್ಕೆ ಮನವಿ ಸಲ್ಲಿಸಬೇಕೆಂದು ಸಭೆ ನಿರ್ಧರಿಸಿತು.

ದಿನಾಂಕ 19-1-82ರಂದು ನಡೆಯಲಿರುವ ಸಾರ್ವತ್ರಿಕ ಮುಷ್ಕರಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ಸಭೆ ವ್ಯಕ್ತಪಡಿಸಿತು. ಫೆಬ್ರವರಿ 21 ಮತ್ತು 22ರಂದು ಮೂಡುಬಿದ್ರೆಯಲ್ಲಿ ಜಿಲ್ಲಾ ರೈತ ಸಮ್ಮೇಳನ ನಡೆಸುವ ಕುರಿತು ನಿರ್ಣಯಿಸಲಾಯಿತು.

●

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

ವಾರ್ಷಿಕ ಮಹಾಸಭೆ

19-12-81ರಂದು ಉಡುಪಿಯಲ್ಲಿ ಎಸ್. ಎಫ್. ಐ. ಟೌನ್ ಸಮಿತಿಯ ವಾರ್ಷಿಕ ಮಹಾಸಭೆ ನಡೆಯಿತು.

ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಆದಾಯ ಸರ್ಟಿಫಿಕೇಟು ಗಳ ಆಧಾರದ ಮೇಲೆ ಶುಲ್ಕ ವಿನಾಯಿತಿ ನೀಡುವ ಸೌಲಭ್ಯವಿದ್ದರೂ, ಉಡುಪಿ ತಹಶೀಲ್ದಾರರ ವಿದ್ಯಾರ್ಥಿ ವಿರೋಧಿ ನೀತಿಯಿಂದಾಗಿ ತಾಲ್ಲೂಕಿನ ನೂರಾರು ವಿದ್ಯಾರ್ಥಿಗಳು ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ. ವಾರ್ಷಿಕ ಆದಾಯ ರೂ. 3,600 ಅಥವಾ ಅದಕ್ಕಿಂತಲೂ ಕಡಿಮೆಯಿರುವುದಾಗಿ ನೀಡಲ್ಪಟ್ಟ ಸರ್ಟಿಫಿಕೇಟುಗಳನ್ನು ಏಕಪಕ್ಷೀಯವಾಗಿ ತಹಶೀಲ್ದಾರರು ತಳ್ಳಿಹಾಕಿದ್ದಾರೆ.

ತಹಶೀಲ್ದಾರರ ವರ್ತನೆಯನ್ನು ಎಸ್. ಎಫ್. ಐ. ವಾರ್ಷಿಕ ಮಹಾಸಭೆಯು ಖಂಡಿಸಿ ಈ ಅನ್ಯಾಯದ ಕ್ರಮದ ವಿರುದ್ಧ ಹೋರಾಡಬೇಕೆಂದು ವಿದ್ಯಾರ್ಥಿಗಳು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಹಾಜರಿದ್ದ ಶ್ರೀ ವಿಶ್ವನಾಥ ರೈಯವರು ಮಾತನಾಡಿ, ಸರಕಾರ ತನ್ನ ಮುಂಗಡ ಪತ್ರದಲ್ಲಿ ಶಿಕ್ಷಣಕ್ಕೆ ವ್ಯಯಿಸುತ್ತಿರುವ ಮೊತ್ತ ಕೇವಲ ಒಂದರಷ್ಟಿದೆ. ಇದನ್ನು ಕೊನೆಯಪಕ್ಷ ಶೇ. 10 ರಷ್ಟಾದರೂ ಏರಿಸಬೇಕೆಂದೂ, ವಿದ್ಯಾರ್ಥಿಗಳು ಈ ದಿಶೆಯಲ್ಲಿ ಹೋರಾಟ ನಡೆಸಬೇಕೆಂದೂ ಕರೆ ನೀಡಿದರು. ಶಿಕ್ಷಣ ಕ್ಷೇತ್ರವು ಒಟ್ಟು ವ್ಯವಸ್ಥೆಯ ಒಂದು ಅವಿಭಾಜ್ಯ ಅಂಗವಾಗಿರುವುದರಿಂದ, ವಿದ್ಯಾರ್ಥಿ ಸಮುದಾಯ ಕೇವಲ ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಅರಿತು ಅವುಗಳ ಪರಿಹಾರಕ್ಕೆ ಹೋರಾಡಿದರೆ ಸಾಲದು, ಸಮಾಜದ ಇತರ ಸಮಸ್ಯೆಗಳ ಬಗ್ಗೆಯೂ ಸರಿಯಾದ ಪರಿಜ್ಞಾನ ಇರತಕ್ಕದ್ದೆಂದು ಹೇಳಿದರು.

ಕೊನೆಯಲ್ಲಿ ಎಸ್. ಎಫ್. ಐ. ಟೌನ್ ಕಮಿಟಿಗೆ ಅಧ್ಯಕ್ಷರಾಗಿ ಶ್ರೀ ಸದಾನಂದಶೆಟ್ಟಿ, ಕಾರ್ಯದರ್ಶಿಯಾಗಿ ಶ್ರೀ ಮನಮೋಹನ್ ನಾಯಕ್, ಸಹಕಾರ್ಯದರ್ಶಿಯಾಗಿ ಎ. ನಾಯಕ್ ಹಾಗೂ ಯು. ರಾಜರು ಮತ್ತು 8 ಮಂದಿ ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಶ್ರೀ ಉಮೇಶ್ ಅವರು ವಂದಿಸಿದರು.

○

ಯಾವುದು ಅಪಪ್ರಚಾರ?

(4ನೇ ಪುಟದಿಂದ)

ಐ ಗೆ ಸೇರಿದವರು ಈ ಹೀನ ಕೃತ್ಯಕ್ಕೆ ಕಾರಣವೆಂಬುದಕ್ಕೆ ಟೇಪ್‌ರಿಕಾರ್ಡ್ ಆಗಿರುವ ಸಾಕ್ಷ್ಯಾಧಾರಗಳಿವೆ. ಕೇವಲ ಅಮರರೆಡ್ಡಿಯವರನ್ನು ಕೊಲೆಗೈಯ್ಯುವುದರಿಂದ ಮಾತ್ರ ತೃಪ್ತಿಪಡದ ಈ ಜನ ಆ ಪ್ರದೇಶದ ನಮ್ಮ ಪಕ್ಷದ ಇನ್ನೊಬ್ಬ ಪ್ರಮುಖ ಸಂಗಾತಿಯನ್ನು ಕೊಲೆಗೈಯ್ಯಲೂ ಯೋಜನೆ ನಡೆಸಿದ್ದರು. ಇವರು ಈಗ ಸೆ. 307 ಐ. ಪಿ. ಸಿ. ಅನ್ವಯ ಪೋಲೀಸರಿಂದ ಬಂಧನಕ್ಕೊಳಗಾಗಿದ್ದಾರೆ.

ಕೃಷ್ಣಾ ಜಿಲ್ಲೆಯ ನಂದಿಗ್ರಾಮದ ಡಿ. ವೈ. ಎಫ್. ಐ. ಸಕ್ರಿಯ ಸದಸ್ಯ ಕಾಂ. ಪ್ರಭಾಕರರೆಡ್ಡಿ ಕೊಲೆಗೀಡಾದ ಇನ್ನೊಬ್ಬರು. ಕೊಲೆಗೆ ಉಪಯೋಗಿಸಿದ ರಕ್ತಸಿಕ್ತ ಶಸ್ತ್ರಗಳನ್ನು ನಂದಿಗ್ರಾಮದ ಸಿ. ಪಿ. ಐ. ಕಚೇರಿಯಲ್ಲಿ ವಶಪಡಿಸಿಕೊಳ್ಳಲಾಗಿದೆ. ಕೊಲೆಪಾತಕರನ್ನು ಗುಂಟೂರಿನ ಸಿ. ಪಿ. ಐ. ಕಚೇರಿಯಲ್ಲಿ ಬಂಧಿಸಲಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ ಈ ಮೇಲ್ಕಾಣಿಸಿದ ಇಬ್ಬರೂ ಸಂಗಾತಿಗಳ ಕೊಲೆಗೆ ಸಿ. ಪಿ. ಐ. ಕಾರ್ಯಕರ್ತರೇ ಕಾರಣವೆಂಬುದು ಪ್ರಶ್ನಾತೀತ. ಸಿ. ಪಿ. ಐ.ನವರು ಈ ಹೊಲಸು ಕೃತ್ಯಕ್ಕೆ ಕಾರಣವೆಂಬುದಕ್ಕೆ ಪ್ರಬಲ ಸಾಕ್ಷ್ಯಾಧಾರಗಳಿವೆ.

ಸಿ. ಪಿ. ಐ. ಕೇಂದ್ರಮಂಡಳಿಯ ಮುಖಪತ್ರಿಕೆ ನ್ಯೂಏಜ್ ಮತ್ತು ರಾಜ್ಯಮಂಡಳಿ ಮುಖಪತ್ರ ಕೆಂಬಾವುಟ ಇವುಗಳು ಈ ಸಾಕ್ಷ್ಯಾಧಾರಗಳನ್ನು ಕಡೆಗಣಿಸಿ ತಳ್ಳಿಹಾಕಿದ್ದೇ ಅಲ್ಲದೇ ಈ ಸಂದರ್ಭವನ್ನು ಪ್ರಕಟಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಪತ್ರಗಳು ಎಡ-ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗೆ ಹಾನಿಯುಂಟು ಮಾಡುತ್ತಿವೆ ಎಂದು ಆಪಾದಿಸಿವೆ.

ತಮ್ಮ ಹಿಂಬಾಲಕರ ಹೀನ ಕೃತ್ಯಗಳನ್ನು ಸಿ.ಪಿ.ಐ. ಖಂಡಿಸದೇ ನಾಚಿಗೆಗೆಟ್ಟು ಸಮರ್ಥಿಸಿಕೊಂಡರೆ ಎಡ-ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಬೆಳೆಯಲು ಶಕ್ಯ.

ತಮ್ಮ ಹಿಂಬಾಲಕರ ಹೀನಕೃತ್ಯಗಳನ್ನು ಸಿ. ಪಿ. ಐ. ಮುಖಂಡರು ಉಗ್ರವಾಗಿ ಖಂಡಿಸಿದರೆ ಆಗ ಎಡ-ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಬಲಗೊಳ್ಳಲು ಸಾಧ್ಯವೇ ವಿನಃ ಘಟನೆಗಳನ್ನು ಅಲ್ಲಗಳೆದು ನಾಚಿಗೆಗೆಟ್ಟು ಸಮರ್ಥಿಸಿಕೊಳ್ಳುವುದರಿಂದಲ್ಲ.

●

ಸತ್ಯ ಸಾಯುವುದಿಲ್ಲ

ಸತ್ಯ, ನ್ಯಾಯ, ಸಮತೆ ಬೇಕೆಂದು
ಭೂಮಿಯ ಆಳದಲ್ಲಿ ಹುಗಿದಿದ್ದ
ಕೊಳೆಯಲಾರದ ಮೂಳೆಯೊಂದು ಮುಲುಗಿತು.
ಆಗ ತಟ್ಟನೇ,
ಹಗಲಿಗೆ ರಾತ್ರಿಯೆಂದೂ, ರಾತ್ರಿಗೆ ಹಗಲೆಂದೂ,
ಗೂಬೆಲ್ಸ್‌ನ ಸತ್ಯವನ್ನು ಸಾರುವ,
'ಅನಾಥತೆಯಲ್ಲಿ ಸನಾತನೀಯ ಪೂಜ್ಯತೆ'ಯನ್ನು
ಬೋಧಿಸುತ್ತಾ ಬಂದ ಹಂದಿಯೊಂದು ಅರಚಿತು.
'ಜಗವೆಲ್ಲಾ ಮಿಥ್ಯ; ಅಲೌಕಿಕವೇ ಸತ್ಯ'.
ಹಾಗಾದರೆ......!!??
ಹೆಮ್ಲಾಕ್‌ನ್ನು ಹೀರಿದ ತುಟಿಗಳು ನುಡಿದದ್ದು ಸುಳ್ಳೇ?
ನೇಣುಗುಂಬಕ್ಕೊರಗಿ ನೆಲಕ್ಕುರುಳಿದ ದೇಹಗಳು ಸುಳ್ಳೇ?
ಬರೀ ಅಲೌಕಿಕವೇ? ಜೀತದಾಳುವಿನ-
ಮೈ ನೆಕ್ಕಿದ ಚಾಟಿಯೇಟು?
ಸುಳ್ಳು, ಶುದ್ಧ ಸುಳ್ಳು!
ಸಾಕ್ರೆಟೀಸ್, ಚಾರ್ವಾಕರ ಸತ್ಯವನ್ನು
ಕಾಲಗರ್ಭದಲ್ಲಿ ಬಚ್ಚಿಡಲಾಗುವುದಿಲ್ಲ.
ಮುಚ್ಚಿಡಲಾಗುವುದಿಲ್ಲ.
ಮಾರ್ಕ್ಸ್‌ನ ನಗ್ನ ಸತ್ಯವನ್ನು
ಏಕೆಂದರೆ; ಅದು ಹುಗಿದಷ್ಟೂ ಕೆಂಡವಾಗಿ
ಹೊಸ ಹೊಸ ಚೇತನಗಳೊಂದಿಗೆ
ಭುಗಿಲೆದ್ದು ಸಿಡಿಯುತ್ತದೆ.
ನೀವು ಸಾಯುತ್ತೀರಿ; ರಕ್ತ ಪಿಪಾಸುಗಳೇ.
ನಿಮ್ಮ ಅಮಾನುಷ ದೌರ್ಜನ್ಯದ ಸುಳಿಯಲ್ಲಿ
ಆದರೆ ಸತ್ಯ ಸಾಯುವುದಿಲ್ಲ.
ಅಣುವಿನ ಚಲನೆಯಲ್ಲಿನ ವಾಸ್ತವತೆಯನ್ನು ಗುರುತಿಸಿ
ನಿತ್ಯ ವಸಂತತೆಯ ಬದುಕನ್ನು ಬಯಸುತ್ತದೆ.
ಏಕೆಂದರೆ ಅದು ಕೂಲಿಯಾಳುಗಳ ಕಣ್ಣೀರು;
ಕಾರ್ಖಾನೆಯಲ್ಲಿ ಕರಗುವವರ ನೋವು.
ಪಂಜರದ ಬದುಕಿನ ಬಿಡುಗಡೆಯಾಗಿ
ಸಂಗಾತಿಯಾಗುತ್ತದೆ, ಖಡ್ಗ, ಕೋವಿಯಾಗುತ್ತದೆ.
ಫಿರಂಗಿಯ ಬಾಯಿಯಿಂದ 'ಜಯಭೇರಿ'
ಮೊಳಗಿಸುತ್ತದೆ.

-ಗುರುಶಾಂತ್ ಎಸ್. ವೈ.

ಜ. 19ರ ಮುಷ್ಕರಕ್ಕೆ ಪ್ರಾಂತ ರೈತಸಂಘದ ಬೆಂಬಲ

ಕರ್ನಾಟಕ ಪ್ರಾಂತ ರೈತಸಂಘದ ಪದಾಧಿಕಾರಿಗಳ ಸಭೆ ಸೇರಿ ತೆಗೆದುಕೊಂಡ ತೀರ್ಮಾನವನ್ನು ಪ್ರಾಂತ ರೈತಸಂಘದ ಪ್ರಧಾನಕಾರ್ಯದರ್ಶಿ ಪಿ. ರಾಮಚಂದ್ರರಾವ್ ಮತ್ತು ಖಜಾಂಚಿ ಪಿ. ಜಗನ್ನಾಥರವರು ಈ ಕೆಳಗಿನ ಪತ್ರಿಕಾ ಹೇಳಿಕೆಯನ್ನು ನೀಡಿರುತ್ತಾರೆ.

ತಾ. 19-1-82ರಂದು ದೇಶಾದ್ಯಂತ ಕಾಂಗ್ರೆಸ್ (ಐ)ನ ಐ.ಎನ್.ಟಿ. ಯು. ಸಿ. ಹೊರತು ಉಳಿದೆಲ್ಲಾ ಕಾರ್ಮಿಕವರ್ಗವು ನಡೆಸುವ 'ಸಾರ್ವತ್ರಿಕ ಮುಷ್ಕರ' ಕಾರ್ಯಕ್ರಮಕ್ಕೆ ಸಂಪೂರ್ಣ ಬೆಂಬಲಕೊಟ್ಟು ಅದನ್ನು ಯಶಸ್ವಿ ಮಾಡುವುದೆಂದು ಕರ್ನಾಟಕ ಪ್ರಾಂತ ರೈತಸಂಘ ತೀರ್ಮಾನಿಸಿರುತ್ತದೆ.

ಭಾರತ ದೇಶದಲ್ಲಿ ಪ್ರಪ್ರಥಮವಾಗಿ ದೇಶದ ಕಾರ್ಮಿಕವರ್ಗವು ರೈತರ ಮತ್ತು ಕೃಷಿಕೂಲಿಗಾರರ ನ್ಯಾಯ ಬೆಲೆ ಮತ್ತು ಜೀವನ ಕೂಲಿಗಾಗಿಯೂ, ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲೂ ಪೇಟೆಪಟ್ಟಣಗಳಲ್ಲಿರುವಂತೆ ರಿಯಾಯಿತಿ ಬೆಲೆಗಳಲ್ಲಿ ಜೀವನಾವಶ್ಯಕ ವಸ್ತುಗಳನ್ನು ಸರಕಾರವು ಒದಗಿಸಬೇಕೆಂಬ ಬೇಡಿಕೆಗಾಗಿಯೂ, ಕಾರ್ಮಿಕವರ್ಗ 'ಸಾರ್ವತ್ರಿಕ ಮುಷ್ಕರ'ಬಂದ್ ಮಾಡುತ್ತಿರುವುದರಿಂದ, ಇದರ ಯಶಸ್ಸು ರೈತರ ಯಶಸ್ಸು ಎಂದು ಮನಗಂಡು ರೈತರು ಸಹ ಈ ಕಾರ್ಯಕ್ರಮದಲ್ಲಿ ಇಳಿದು ಭಾಗವಹಿಸಬೇಕಾಗಿರುವುದೆಂದು ಪ್ರಾಂತ ರೈತಸಂಘ ತೀರ್ಮಾನಿಸುತ್ತದೆ.

ಸರ್ಕಾರವು ರೈತರ ಬೆಳೆಗಳಿಗೆ ಲಾಭದಾಯಕ ಬೆಲೆ ನಿರ್ಣಯಿಸುವ ಬಗ್ಗೆ, ಕೃಷಿಕೂಲಿಗಾರರ ಕನಿಷ್ಟ ಕೂಲಿ ಪುನರ್ವಿಮರ್ಶೆ ಮಾಡದಿರುವುದರ ಬಗ್ಗೆ ಅನ್ಯಾಯ ಲೆವಿ ನೀತಿಯನ್ನು ಜಾರಿಗೆ ತಂದಿರುವುದರ ಬಗ್ಗೆ, ಸಾಲ ರದ್ಧತಿ ಮಾಡದಿರುವುದರ ಬಗ್ಗೆ ತಮ್ಮ ಆತಂಕ ಮತ್ತು ವಿರೋಧವನ್ನು ವ್ಯಕ್ತಪಡಿಸುತ್ತಿರುವಾಗಲೇ ಕೇಂದ್ರ ಸರ್ಕಾರವು ಐ. ಎಂ. ಎಫ್. ಸಾಲ ಪಡೆದು ನಮ್ಮ ದೇಶವನ್ನು ಸಾಮ್ರಾಜ್ಯಶಾಹಿಗಳಿಗೆ ಒತ್ತೆ ಇಡುತ್ತಿದೆಯೆಂದು, ಸರ್ಕಾರದ ನೀತಿಯನ್ನು ಪ್ರಾಂತ ರೈತಸಂಘ ವಿರೋಧಿಸುತ್ತದೆ.

ಕಾಂಗ್ರೆಸ್ ಸರ್ಕಾರವು ರೈತ ಕಾರ್ಮಿಕರನ್ನು ವಿಭಜನೆಮಾಡಿ ಆಳುವ ನೀತಿಯನ್ನು ಅನುಸರಿಸುತ್ತಾ ಬಂದರೂ, ಕರ್ನಾಟಕದ ನರಗುಂದ, ನವಲಗುಂದದಿಂದ ಸ್ಫೂರ್ತಿಗೊಂಡ ರೈತರ ರಾಜ್ಯಾದ್ಯಂತ ಚಳುವಳಿಯಲ್ಲಿ ಕಾರ್ಮಿಕವರ್ಗದ ಪಾತ್ರ ಮಹತ್ವದ್ದು. 1980 ಡಿಸೆಂಬರ್ 12ರಂದು ನಡೆದ ಪ್ರಾಂತ ರೈತಸಂಘದ ಆಶ್ರಯದಲ್ಲಿ ನಡೆದ ರೈತರ ಮತಪ್ರದರ್ಶನ ಮತ್ತು 16 ಫೆಬ್ರವರಿ 1981ರಂದು ನರಗುಂದದಿಂದ ಬೆಂಗಳೂರಿಗೆ ನಡೆದು ಬಂದ ರೈತರ ಜಾಥಾದಲ್ಲಿ ಕಾರ್ಮಿಕರು, ಭಾಗವಹಿಸಿ ಕೊಟ್ಟಂತ ಬೆಂಬಲವನ್ನು ಪ್ರಾಂತ ರೈತಸಂಘ ಸ್ವಾಗತಿಸುತ್ತದೆ. ಆದ್ದರಿಂದ ನಾವು ತಾ. 19-1-82ರ 'ಸಾರ್ವತ್ರಿಕ ಮುಷ್ಕರ'ವನ್ನು ಯಶಸ್ವಿಮಾಡಲು ತೀರ್ಮಾನಿಸಿರುತ್ತೇವೆ."

ರಾಜ್ಯಸರಕಾರಿ ನೌಕರರ ಮುಷ್ಕರ ಬೆಂಬಲಿಸಿ ಬೆಂಗಳೂರಿನಲ್ಲಿ ಏಕತಾ ಸಭೆ

ಜನವರಿ 6ರಿಂದ ನಡೆಯಲಿರುವ ರಾಜ್ಯಸರಕಾರಿ ನೌಕರರ ಅನಿರ್ದಿಷ್ಟ ಕಾಲದ ಮುಷ್ಕರವನ್ನು ಬೆಂಬಲಿಸಿ, ಜನವರಿ 2ರಂದು ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ಸರಕಾರಿ ನೌಕರರ ಮತ್ತು ವಿವಿಧ ಕಾರ್ಮಿಕ ಸಂಘಗಳ ಏಕತಾ ಸಭೆಯು ನಡೆಯಿತು.

ಸಭೆಯನ್ನುದ್ದೇಶಿಸಿ, ಕಾಂ. ಎಸ್. ಸೂರ್ಯನಾರಾಯಣರಾವ್ (ಸಿ.ಐ.ಟಿ.ಯು.) ಕಾಂ. ಎಂ. ಎಸ್. ಕೃಷ್ಣನ್ (ಎ. ಐ. ಟಿ. ಯು. ಸಿ.) ಕಾಂ. ಬಾಲಕೃಷ್ಣ (ಜನರಲ್ ಇನ್‌ಷೂರೆನ್ಸ್ ನೌಕರರ ಸಂಘ) ಕಾಂ. ಕೃಷ್ಣ (ಕೆ. ಇ. ಬಿ. ನೌಕರರ ಸಂಘ) ರಾಧಾಕೃಷ್ಣ (ಅಕೌಂಟೆಂಟ್ ಜನರಲ್ ನೌಕರರ ಸಂಘ) ಕಾಂ. ಶಂಕರ್ (ಎಲ್. ಐ. ಸಿ. ನೌಕರರ ಸಂಘ) ಕಾಂ. ಎಸ್. ಬಿ. ಶ್ವೇತಾದ್ರಿ (ಬಿ. ಎಂ. ಎಸ್.) ಕಾಂ. ಸುಬ್ರಹ್ಮಣ್ಯಂ (ಪೊಲ್ಯಾಸ್ ಎಂಪ್ಲಾಯೀಸ್ ಯೂನಿಯನ್) ಕಾಂ. ಟಿ. ವಿ. ರಾಘವನ್, ಕಾಂ. ಬಶೀರ್ ಅಹಮ್ಮದ್ (ರಾಜ್ಯ ಸರಕಾರಿ ನೌಕರರ ಸಂಘ) ಕಾಂ. ಕೆ.ಎ. ಪಾರ್ವತಿ (ಮಿನಿಸ್ಟೀರಿಯಲ್ ನೌಕರರ ಸಂಘ) ಮೊದಲಾದವರು ಮಾತನಾಡಿ, ಸರ್ಕಾರಿ ನೌಕರರ ನ್ಯಾಯ ಸಮ್ಮತವಾದ ಬೇಡಿಕೆಗಳು ಈಡೇರುವಂತಾಗಲೂ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು.

ಕಾಂ. ಡಿ. ರಾಜಗೋಪಾಲ್ (ಎಂ. ಎಲ್. ಸಿ.) ಹಾಗೂ ಎಚ್. ಎಂ. ಎಸ್.ನ ರಾಜ್ಯಘಟಕದ ಅಧ್ಯಕ್ಷ, ಇವರ ನಿಧನದ ಬಗ್ಗೆ ಸಭೆ ಎರಡು ನಿಮಿಷ ಮೌನವನ್ನು ಆಚರಿಸಿತು.

ಈ ಬೃಹತ್ ಸಭೆಯ ಅಧ್ಯಕ್ಷತೆಯನ್ನು ಕಾಂ. ಎಸ್. ಚನ್ನಬಸವಯ್ಯ (ಎಂ. ಎಲ್. ಸಿ.) ವಹಿಸಿದ್ದರು. ಕಾಂ. ಆರಾಧ್ಯ ಸ್ವಾಗತಿಸಿದರು. ಕಾಂ. ಸಿಪ್ಪೇಗೌಡರು ವಂದಿಸಿದರು.

●

ಎಸ್.ಎಫ್.ಐ. ೧೧ನೇ ವಾರ್ಷಿಕೋತ್ಸವ

ದೊಡ್ಡಬಳ್ಳಾಪುರ

ಎಸ್. ಎಫ್. ಐ.ನ ದೊಡ್ಡಬಳ್ಳಾಪುರ ಕೊಂಗಾಡಿಯಪ್ಪ ಕಾಲೇಜು ಶಾಖೆಯ ಆಶ್ರಯದಲ್ಲಿ ದಿನಾಂಕ 5-1-82ರಂದು ಎಸ್. ಎಫ್. ಐ.ನ 11ನೇ ವಾರ್ಷಿಕೋತ್ಸವ ಆಚರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಬಾಲಾಜಿಯವರು ವಹಿಸಿದ್ದರು.

ಸಭೆಯನ್ನುದ್ದೇಶಿಸಿ ರಾಜ್ಯಘಟಕದ ಉಪಾಧ್ಯಕ್ಷ ಕಾಂ. ರಾಜಣ್ಣ, ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಆರ್. ಆರಾಧ್ಯ ಮಾತನಾಡಿದರು. ಜನವರಿ 19ರಂದು ನಡೆಯಲಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಸಹಕರಿಸಲು ಮನವಿ ಮಾಡಿದರು.

ಮೆರವಣಿಗೆ, ಬಹಿರಂಗ ಸಭೆ

ಸ್ಥಳೀಯ ಸರಕಾರಿ ಕಿರಿಯ ಕಾಲೇಜಿನಲ್ಲಿ ಇಂಗ್ಲೀಷ್ ಅಧ್ಯಾಪಕರ ನೇಮಕ ಹಾಗೂ ಪ್ರೌಢ ಶಾಲೆಯ ಹಾಸ್ಟೆಲ್‌ನಲ್ಲಿಯ ದುರಾಡಳಿತದ ವಿರುದ್ಧ ವಿದ್ಯಾರ್ಥಿಗಳು ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು. ನಂತರ ಪುರಸಭಾ ಕಚೇರಿಯ ಆವರಣದಲ್ಲಿ ಬಹಿರಂಗ ಸಭೆ ನಡೆಯಿತು.

ಬಿಜಾಪುರ

30-12-81ರಂದು ಬಿಜಾಪುರದಲ್ಲಿ ಎಸ್. ಎಫ್. ಐ.ನ ಸ್ಥಾಪನಾ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಕಾಂ. ಎನ್. ಕೆ. ಉಪಾಧ್ಯಾಯ ಮತ್ತು ಕಾಂ. ಭೀಮಸಿ ಕಲಾದಗಿ ಇವರುಗಳು ಆಗಮಿಸಿದ್ದರು.

ಎಸ್.ಎಫ್.ಐ. ಉಪಾಧ್ಯಕ್ಷರಾದ ಕಾಂ. ಎಲ್. ವಿ. ಸ್ಥೊನ್ನದ ಹಾಗೂ ಖಜಾಂಚಿ ಪಿ. ಬಿ. ನರೇಗಲ್ ಇವರು ಎಸ್.ಎಫ್.ಐ. ಧ್ಯೇಯೋದ್ದೇಶಗಳ ಕುರಿತು, ಹೊಸಪೇಟೆಯ ಸಭೆಯ ಮುಖ್ಯ ನಿರ್ಣಯಗಳನ್ನು ವಿವರಿಸಿದರು.

ಅಧ್ಯಾಪಕಿ ನಜ್ಮಾಭಾಂಗಿಯವರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ, ಪೋಲೀಸರ ಸಮಕ್ಷಮದಲ್ಲಿ ಪತ್ರಕರ್ತರಿಗೆ ಬೆದರಿಕೆ, ರೈತಸಂಘದ ಕಚೇರಿಗೆ ಕೆಲವು ಕಿಡಿಗೇಡಿಗಳು ನುಗ್ಗಿ ಹಲ್ಲೆ ಮಾಡಿದ್ದನ್ನು ಖಂಡಿಸಲಾಯಿತು.

ಹೊಸಪೇಟೆ

31-12-81ರಂದು ಹೊಸಪೇಟೆಯ ವಾಲ್ಮೀಕಿ ಆಶ್ರಮದ ಮೈದಾನದಲ್ಲಿ ಎಸ್. ಎಫ್. ಐ.ನ 11ನೇ ವಾರ್ಷಿಕೋತ್ಸವ ಆಚರಿಸಲಾಯಿತು. ಸ್ಥಳೀಯ ವಕೀಲರಾದ ಪ್ರಲ್ಹಾದ ರಾವ್ ಅವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸ್ಥಳೀಯ 'ಹೋರಾಟ' ವಾರಪತ್ರಿಕೆಯ ಪತ್ರಕರ್ತ ಶ್ರೀ ಜೈನುಲ್ಲಾ ಮತ್ತು ರಾಯಚೂರಿನ ದುಂಡಿಮ ಪತ್ರಿಕೆಯ ಗಂಗಾಧರ ಕುಪ್ಪಗಿ ಆಗಮಿಸಿದ್ದರು.

ಆರಂಭದಲ್ಲಿ ಕಾಂ. ನರಸಿಂಹ ಕ್ರಾಂತಿಗೀತೆ ಹಾಡಿದರು. ಕೊನೆಯಲ್ಲಿ ಕಾಂ ಎಸ್. ವೆಂಕಟೇಶ್ ವಂದಿಸಿದರು.

●

ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ಸಿ.ಪಿ.ಐ.(ಎಂ) ಕರೆ

1982 ಜನವರಿ 19ರಂದು ರಾಷ್ಟ್ರವ್ಯಾಪಿಯಾಗಿ ನಡೆಯಲಿರುವ ಒಂದು ದಿನದ ಸಾರ್ವತ್ರಿಕ ಮುಷ್ಕರವನ್ನು ಅತ್ಯಂತ ಯಶಸ್ವಿಗೊಳಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಎಲ್ಲಾ ಸಾಮೂಹಿಕ ಸಂಘಟನೆಗಳು ಹಗಲಿರುಳೂ ಶ್ರಮಿಸಲು ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಕರೆ ಇತ್ತಿರುವರು. ದುಡಿಯುವ ಜನತೆ ಮತ್ತು ರೈತರೂ ಸೇರಿದಂತೆ ಇತರೆಲ್ಲಾ ಜನ ವಿಭಾಗದ ಬೇಡಿಕೆಗಳನ್ನು ಮುಂದಿಟ್ಟು, ಪ್ರಜಾಪ್ರಭುತ್ವಹಕ್ಕುಗಳನ್ನು ರಕ್ಷಿಸಲು ಐಕ್ಯ ಕಾರ್ಯಾಚರಣೆಗಿಳಿದಿರುವ ಕಾರ್ಮಿಕ ವರ್ಗಕ್ಕೆ ಬೆಂಬಲವೀಯುವುದು ಎಲ್ಲರ ಕರ್ತವ್ಯ. ಜನವರಿ 19ರ ಮುಷ್ಕರವು ಯಶಸ್ವಿಯಾದಲ್ಲಿ, ದೇಶದ ರಾಜಕೀಯದಲ್ಲಿ ಮಹತ್ವದ ಗುಣಾತ್ಮಕ ಬದಲಾವಣೆ ಬರಲಿದೆ. ಎಡ ಶಕ್ತಿ ಮತ್ತು ಎಡ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯ ಮುನ್ನಡೆಗೆ ಹೊಸ ಸ್ಫೂರ್ತಿ 19ರ ಮುಷ್ಕರ. ಆದುದರಿಂದಲೇ ವಿದ್ಯಾರ್ಥಿ ಯುವಜನತೆ, ಬುದ್ಧಿಜೀವಿಗಳು, ಮಹಿಳೆಯರು, ರೈತರು ಮತ್ತು ಎಲ್ಲಾ ವಿಭಾಗದ ದುಡಿಯುವ ಜನತೆಯ ಬೆಂಬಲವನ್ನು ಸಂಘಟಿಸಿ 19ರ ಮುಷ್ಕರ ಯಶಸ್ವಿಯಾಗುವಂತೆ ಮಾಡಲು ಶ್ರಮಿಸುವಂತೆ ಸಿ.ಪಿ.ಐ.(ಎಂ) ರಾಜ್ಯಸಮಿತಿ ಕರೆ ಈಯುತ್ತದೆ. ಕಾಂಗ್ರೆಯ ಸರ್ವಾಧಿಕಾರಿ, ಕಾರ್ಮಿಕ ವಿರೋಧಿ ಕ್ರಮಗಳಿಗೆ ಸವಾಲು 19ರ ಮುಷ್ಕರ. ಅದನ್ನು ಯಶಸ್ವಿಗೊಳಿಸುವುದು ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಕರ್ತವ್ಯ.

ಮುಂಬೈ ಸಮಾವೇಶ ತೋರಿದ ಮಾರ್ಗ

(1ನೇ ಪುಟದಿಂದ)

ಧಿಸಿ, ಅವನ್ನು ಕಾನೂನುಬಾಹಿರ ಎಂದು ಘೋಷಿಸುವ ಶಾಸನಗಳನ್ನು ಜಾರಿಗೊಳಿಸಲಾಗುತ್ತಿದೆ. ಸಾರಾಸಗಟು ವಜಾ, ಚಾರ್ಜ್‌ಶೀಟ್, ಸಸ್ಪೆಂಡ್, ಟ್ರಾನ್ಸ್‌ಫರ್, ಕಡ್ಡಾಯ ನಿವೃತ್ತಿ ಮಾತ್ರವಲ್ಲ ಟ್ರೇಡ್‌ಯೂನಿಯನ್ ಕಾರ್ಯಕರ್ತರ ಗಡೀಪಾರು ಇವೆಲ್ಲಾ ಈಗ ಸಾಮಾನ್ಯ ಸಂಗತಿಗಳಾಗಿಬಿಟ್ಟಿವೆ.

ಸಕಕಾರ ಒಪ್ಪಂದಗಳ ಹಾಗೂ ಸಾಮೂಹಿಕ ಚೌಕಾಸಿಯ ಪಾವಿತ್ರತೆಯನ್ನು ಗಾಳಿಗೆ ತೂರಿ ನೌಕರರ ಮೇಲೆ ತನ್ನ ಇಚ್ಛೆ ಬಂದಂತೆ ವೇತನ ಹಾಗೂ ಶರತ್ತುಗಳನ್ನು ಹೇರಲು ನಿರ್ಧರಿಸಿದೆ ಎಂಬುದು ಇತ್ತೀಚಿನ ಘಟನೆಗಳಿಂದ ನಿಸ್ಸಂಶಯವಾಗಿ ಸಾಬೀತಾಗುತ್ತಿದೆ.

ಮುಂಬೈ ಸಮಾವೇಶ ಹತ್ತಂಶಗಳ ಬೇಡಿಕೆಗಳನ್ನು ರೂಪಿಸಿತ್ತು. ದೀರ್ಘ ಮತ್ತು ಸತತ ಹೋರಾಟದ ಅಗತ್ಯವನ್ನು ಮನಗಂಡು ಹಾಗೂ ಸಾಮೂಹಿಕ ಬೆಂಬಲವನ್ನು ಹೆಚ್ಚಿಸಲು ವ್ಯಾಪಕಗೊಳಿಸುವ ದೃಷ್ಟಿಯಿಂದ ಇಂತಹ ರಾಜ್ಯವಾರು ಸಮಾವೇಶಗಳನ್ನು ನಡೆಸಬೇಕೆಂದು ನಿರ್ಧರಿಸಿತ್ತು. 1. ಅಖಿಲಭಾರತ ಬೇಡಿಕೆ ದಿನಾಚರಣೆ 2. ಕಾರ್ಮಿಕರ ಬೃಹತ್ ಪಾರ್ಲಿಮೆಂಟ್ ಚಲೋ ಹಾಗೂ 3. ಎಲ್ಲಾ ಕೈಗಾರಿಕಾ ವಲಯಗಳಲ್ಲಿ ಒಂದು ದಿನದ ದೇಶವ್ಯಾಪೀ ಮುಷ್ಕರ ಇವನ್ನು ಒಳಗೊಂಡಂತೆ ಮುಂದಿನ ಕ್ರಮಾಚರಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಇಂತಹ ಸಮಾವೇಶಗಳನ್ನು ನಡೆಸಬೇಕೆಂದು ನಿರ್ಧರಿಸಲಾಗಿತ್ತು.

ಈ ರಾಷ್ಟ್ರೀಯ ಸಮಾವೇಶದ ಮಾದರಿಯಲ್ಲಿ ರಾಜ್ಯವಾರು ಸಮಾವೇಶಗಳು, ಕೆಲವೆಡೆ ಸ್ಥಳೀಯ ಹಾಗೂ ಜಿಲ್ಲಾ ಮಟ್ಟದ ಸಮಾವೇಶಗಳು ಈಗಾಗಲೇ ಜರುಗಿವೆ.

ಅಗತ್ಯ ಸೇವಾ ನಿರ್ವಹಣಾ ವಿಶೇಷಾಜ್ಞೆ (ಇ.ಎಸ್.ಎಂ.ಓ) ಯನ್ನು ಹೊರಡಿಸಿದ್ದು ಮುಂಬೈ ಸಮಾವೇಶದ ನಂತರ. ಈ ವಿಶೇಷಾಜ್ಞೆ ನಂತರ ಶಾಸನವಾಯಿತು. ಈ ಕರಾಳ ವಿಶೇಷಾಜ್ಞೆಯ ವಿರುದ್ಧ ದೇಶಾದ್ಯಂತ ಆಗಸ್ಟ್ 17ರಂದು ಪ್ರತಿಭಟನೆಯ ಕೂಗು ಮೊಳಗಿತು.

ನವೆಂಬರ್ 3ರಂದು ಅಖಿಲಭಾರತ ಬೇಡಿಕೆ ದಿನ ಹಾಗೂ ಪ್ರತಿಭಟನಾ ದಿನವನ್ನು ಯಶಸ್ವಿಯಾಗಿ ಆಚರಿಸಲಾಯಿತು. ಅದಿನ ಮತಪ್ರದರ್ಶನ, ಮೆರವಣಿಗೆಗಳು ನಡೆದವು. ಕೇರಳದಲ್ಲಿ ಕೇಂದ್ರ ಸರಕಾರದ ಕಚೇರಿಗಳೆದುರು ಸಾಮೂಹಿಕ ಧರಣಿ ನಡೆಯಿತು.

ನವೆಂಬರ್ 23ರ ಪಾರ್ಲಿಮೆಂಟ್ ಚಲೋ ಈ ಆಂದೋಲನವನ್ನು ಮತ್ತಷ್ಟು ಮುಂದುವರೆಸಿದೆ.

ಈಗ ನಡೆಯುತ್ತಿದೆ (ಜನವರಿ 19ರಂದು) ಎಲ್ಲಾ ಕೈಗಾರಿಕೆಗಳಲ್ಲಿ ಅಖಿಲಭಾರತ ಮುಷ್ಕರಕ್ಕೆ ತಯ್ಯಾರಿ!

●

ಚರ್ಚಾ ಸ್ಪರ್ಧೆ

ದಿನಾಂಕ 3-1-82ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಉದಯಭಾನು ಕಲಾಸಂಘದವರು ಏರ್ಪಡಿಸಿದ್ದ ಅಂತರ್‌ಕಾಲೇಜು (ವಿಶ್ವವಿದ್ಯಾಲಯ ಮಟ್ಟದ) ಚರ್ಚಾ ಸ್ಪರ್ಧೆಯಲ್ಲಿ ಎಸ್. ಎಫ್. ಐ. ನಗರ ಸಮಿತಿಯ ಪದಾಧಿಕಾರಿ ಕಾಂ. ಕೆ. ಸುಶೀಲಾ ಪ್ರಥಮ ಬಹುಮಾನ ಗಳಿಸಿದ್ದಾರೆ.

ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿದ್ದ 30 ಕಾಲೇಜುಗಳ 60 ಸ್ಪರ್ಧಿಗಳು ಭಾಗವಹಿಸಿದ್ದರು.

'ರಾಷ್ಟ್ರದ ಪ್ರಗತಿಗೆ ರಾಜ್ಯಗಳಿಗೆ ಸ್ವಾಯತ್ತತೆ ಅಗತ್ಯ' ಎಂಬ ವಿಷಯದ ಬಗ್ಗೆ ಕಾಂ. ಸುಶೀಲ ಮಾತನಾಡಿ ರಾಜ್ಯಗಳಿಗೆ ದೊರೆಯಬೇಕಾದ ಸ್ವಾಯತ್ತತೆಯ ಅಗತ್ಯವನ್ನು ಸಭಿಕರಿಗೆ ಮನಗಾಣಿಸಿದರು.

ಪ್ರಥಮ ಬಹುಮಾನಗಳಿಸಿದ ಕಾಂ. ಸುಶೀಲಾರನ್ನು ಐಕ್ಯರಂಗ ಅಭಿನಂದಿಸುತ್ತದೆ.

●

ಸಂಪಾದಕೀಯ

(1ನೇ ಪುಟದಿಂದ)

ವಣೆಗಳನ್ನು ಮುಂದೂಡಿ, ತಮಗೆ ಬೇಕಾದ ವಾತಾವರಣವನ್ನು ಕಲ್ಪಿಸಲು ಕಾಂಗ್ರೆ ಆಡಳಿತಗಾರರು ಯೋಚಿಸುತ್ತಲಿದ್ದಾರೆ. ಎಡರಂಗ ಮತ್ತು ಜನತೆ ಚುನಾವಣೆಗೆ ಸಿದ್ಧವಿದ್ದರೆ, ಕಾಂಗ್ರೆಗೆ ಅದು ಬೇಡವಾಗಿದೆ!

ತ್ರಿಪುರಾದಲ್ಲಿ ಆದಿವಾಸಿ ಪ್ರದೇಶದ ಸ್ವಾಯತ್ತ ಜಿಲ್ಲಾ ಮಂಡಳಿಗೆ ಚುನಾವಣೆ ನಡೆಸಿದರೆ, ಅಲ್ಲಿ ಕಾಂಗ್ರೆ ಚುನಾವಣೆಯಲ್ಲಿ ಭಾಗವಹಿಸುವುದೇ ಇಲ್ಲ! ತನಗೆ ಸೋಲು ಖಚಿತವಾದಾಗ ಚುನಾವಣೆಗಳೇ ಕಾಂಗ್ರೆಗೆ ಬೇಕಾಗಿಲ್ಲ. ಗಡವಾಲ್ ಲೋಕಸಭಾ ಕ್ಷೇತ್ರದಲ್ಲಿ ನಡೆದ ಉಪಚುನಾವಣೆಯನ್ನು ಮುಖ್ಯ ಚುನಾವಣಾ ಕಮಿಷನರವರು ರದ್ದುಗೊಳಿಸಿ, ಮತ್ತೆ ಚುನಾವಣೆ ನಡೆಸುವುದಾಗಿ ಘೋಷಿಸಿದರೂ, ಉಸ್ತುವಾರಿ ನಡೆಸಲು ಸಾಕಷ್ಟು ಪೋಲೀಸ್ ಮತ್ತು ರಕ್ಷಣಾ ಸಿಬ್ಬಂದಿಗಳು ದೊರೆಯುವುದಿಲ್ಲ ಎಂಬ ಕಾರಣದಿಂದ ಚುನಾವಣೆಯನ್ನು ಮುಂದೂಡಲಾಗುತ್ತಿದೆ. ತನಗೆ ಅನುಕೂಲವಿದ್ದಾಗ ಮತ್ತು ತಾನು ಗೆಲ್ಲುವ ಧೈರ್ಯವಿದ್ದಾಗ ಚುನಾವಣೆಗಳನ್ನು ನಡೆಸುವುದು, ತನಗೆ ಸೋಲು ಖಚಿತವಾದಾಗ ಚುನಾವಣೆಗಳನ್ನು ಮುಂದೂಡುವುದು ಅಥವಾ ತಾನು ಸ್ಪರ್ಧಿಸದಿರುವುದು - ಇದು ಕಾಂಗ್ರೆಯ ನೀತಿ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವಕ್ಕೆ ಮಾರಕವಾಗಿರುವ ಈ ನೀತಿಯನ್ನು ಅನುಸರಿಸುವ ಉದ್ದೇಶ ತನ್ನ ಸರ್ವಾಧಿಕಾರಿ ಆಕಾಂಕ್ಷೆಯನ್ನು ಈಡೇರಿಸುವುದಕ್ಕಾಗಿದೆ.

ತನ್ನ ಪಕ್ಷದ ಆಂತರಿಕ ಪ್ರಜಾಪ್ರಭುತ್ವದ ಬಗ್ಗೆಯೇ ಕಾಂಗ್ರೆ ಏನು ಮಾಡುತ್ತಿದೆ? ಕಳೆದ ಹನ್ನೆರಡು ವರ್ಷಗಳಲ್ಲಿ ಕಾಂಗ್ರೆಯೊಳಗೆ ಯಾವುದೇ ಸಂಘಟನಾ ಚುನಾವಣೆಗಳು ನಡೆದಿಲ್ಲ. ವ್ಯಕ್ತಿನಿಷ್ಠೆಯ ಆಧಾರಿತವಾಗಿ ನಿಂತಿರುವ ಬೆನ್ನು ಮೂಳೆ ಇಲ್ಲದ ಮುಂದಾಳುಗಳಿಂದ ತುಂಬಿರುವ ಕಾಂಗ್ರೆ ಪಕ್ಷವು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದ. ಹಂತಹಂತವಾಗಿ ಏಕ ಪಕ್ಷದ, ಏಕವ್ಯಕ್ತಿಯ ಸರ್ವಾಧಿಕಾರ ಸ್ಥಾಪನೆಯತ್ತ ದೇಶವನ್ನು ಕೊಂಡೊಯ್ಯುತ್ತಿರುವ ಕಾಂಗ್ರೆಯ ಸರ್ವಾಧಿಕಾರಿ ಕ್ರಮಗಳನ್ನು ಅತ್ಯಂತ ವಿಶಾಲ ತಳಹದಿಯ ಐಕ್ಯತೆಯ ಮೂಲಕ ವಿರೋಧಿಸುವುದು ಅತ್ಯಂತ ತುರ್ತಿನ ಕೆಲಸ. ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ, ಸರ್ವಾಧಿಕಾರಿ ಶಕ್ತಿಯನ್ನು ಹಿಮ್ಮೆಟ್ಟಿಸುವ ಕೆಲಸಕ್ಕೆ ನೇತೃತ್ವವಹಿಸಬೇಕು. ಕೇರಳದಲ್ಲಿ ಅಲ್ಪಸಂಖ್ಯಾತ ಸರಕಾರವು ಅಧಿಕಾರದಲ್ಲಿರಲು ಯಾವುದೇ ನೈತಿಕ ಹಕ್ಕಿಲ್ಲ. ಅಲ್ಲಿ ವಿಧಾನಸಭೆಯನ್ನು ವಿಸರ್ಜಿಸಿ, ಕೂಡಲೇ ಚುನಾವಣೆ ನಡೆಸಲು ಎಲ್ಲಾ ಎಡ ಪ್ರಜಾಪ್ರಭುತ್ವ ಶಕ್ತಿಗಳೂ ಒತ್ತಾಯ ತರಬೇಕು. ಕಾಂಗ್ರೆ ಪ್ರಜಾಸತ್ತೆಯನ್ನು ಕೊಲೆಗೈಯಲು ನಡೆಸುತ್ತಿರುವ ಸಂಚನ್ನು ಮುರಿಯಬೇಕಾಗಿದೆ.

●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT